### ಅಧ್ಯಾಯ ೪

## ಕೃಷಿ ಮತ್ತು ನೀರಾವರಿ

ನಾಡಿಗೇ ಜೀವನದಿಯಾಗಿರುವ ಕಾವೇರಿಯು ತಾಲೂಕಿಗೂ ಜೀವನದಿಯಾಗಿದೆ. ಅದರ ಉಪನದಿಗಳಲ್ಲಿ ಒಂದಾದ ಕಪಿಲ ನದಿಯೂ ತಾಲೂಕಿಗೆ ವರಪ್ರದವಾಗಿದೆ. ಕಾವೇರಿ ದಂಡೆಯ ಮೇಲಿರುವ ತಾಲೂಕಿನ ಬೆನಕನಹಳ್ಳಿ, ಹೆಮ್ಮಿಗೆ, ತಲಕಾಡು, ಮುಂತಾದವು ಶಿಲಾಯುಧ ಮಾನವನಿಗೂ ಆಶ್ರಯ ನೀಡಿದ್ದು, ಬಹುಹಿಂದಿನಿಂದಲೂ ಕೃಷಿ ಬೆಳವಣಿಗೆಗೆ ನೆರವಾಗಿವೆ. ತಾಲೂಕಿನಲ್ಲಿ ಮಳೆಯಾಶ್ರಿತ ಬೇಸಾಯದೊಂದಿಗೆ ನದಿ–ಕಾಲುವೆ, ಕೆರೆ ಆಧಾರಿತ ನೀರಾವರಿ ಕೃಷಿ ಪದ್ಧತಿಯು ಬೆಳೆದು ಬಂದಿರುವುದಕ್ಕೆ ಚಾರಿತ್ರಿಕ ಪುರಾವೆಗಳಿವೆ. ಗ್ರಾಮ, ಪುರ, ಅಗ್ರಹಾರಗಳ ನಿರ್ಮಾಣ, ಅಭಿವೃದ್ಧಿಗಳಿಗೂ ಸಂಬಂಧಿಸಿದಂತೆ ಶಾಸನೋಲ್ಲೇಖಗಳು ಲಭ್ಯವಿದೆ. ಪ್ರಾಚೀನ ಕಾಲದಲ್ಲಿ ಕೃಷಿಯೇ ಸಮಾಜದ ಬೆನ್ನೆಲುಬಾಗಿದ್ದ ಸಂದರ್ಭದಲ್ಲಿ ಆಳರಸರು ಕೃಷಿಗೆ ವಿಶೇಷ ಪ್ರಾಧಾನ್ಯತೆ ನೀಡುತ್ತಿದ್ದ ಅಂಶ ಆಯಾ ಕಾಲದ ಶಾಸನಗಳಿಂದ ವೇದ್ಯವಾಗುತ್ತದೆ. ತಾಲೂಕಿನಲ್ಲಿ ಪತ್ತೆಯಾಗಿರುವ ಗಂಗರ ಕಾಲದ ಆಲ್ಗೋಡು, ಬನ್ನೂರು, ತಲಕಾಡು, ಮೂಗೂರು, ಮುಂತಾದೆಡೆಯ ಶಾಸನಗಳಲ್ಲಿ ದಾನ ಬಿಟ್ಟ ಭೂಮಿ, ಕೆರೆ–ಕುಂಟೆಗಳ ನಿರ್ಮಾಣ, ನಿರ್ವಹಣೆಗಳ ಬಗ್ಗೆ ವಿವರಗಳು ಲಭ್ಯವಿದ್ದರೆ, ಚೋಳರ ಕಾಲಕ್ಕೆ ಸೇರಿದ ಬನ್ನೂರು, ತಡಿಮಾಲಂಗಿ; ಹೊಯ್ಸಳರ ಕಾಲಕ್ಕೆ ಸೇರಿದ ತುಂಬಲ, ಚಿದರಳ್ಳಿ, ತಡಿಮಾಲಂಗಿ, ಭೈರಾಪುರ, ತಲಕಾಡು, ಸೋಮನಾಥಪುರ ಮುಂತಾದೆಡೆ ಇರುವ ಶಾಸನಗಳಲ್ಲಿ ಲಭ್ಯವಿದ್ದ ಕೆರೆ–ಕಾಲುವೆ ನೀರಾವರಿ ಸೌಲಭ್ಯ, ಕೆರೆಗಳ ನಿರ್ವಹಣೆಗೆಂದು ಮಾಡುತ್ತಿದ್ದ ವ್ಯವಸ್ಥೆ, ವಿಧಿಸುತ್ತಿದ್ದ ತೆರಿಗೆ, ಬೊಕ್ಕಸಕ್ಕೆ ಬರುತ್ತಿದ್ದ ಸಿದ್ಧಾಯ–ಸುಂಕಗಳ ಬಗ್ಗೆ ಮಾಹಿತಿ ಲಭಿಸುತ್ತಿದ್ದು, ತಡಿಮಾಲಂಗಿಯ ೧೨೬೦ರ ಶಾಸನದಲ್ಲಿ ಅರಗಟ್ಟ (ಪರ್ಷಿಯನ್ ಗಾಲಿ)ವನ್ನು ಏತ ನೀರಾವರಿಗೆ ಬಳಸುತ್ತಿದ್ದ ಉಲ್ಲೇಖವಿದೆ. ನೀರಾವರಿಗೆ ನಿದರ್ಶನವಾಗಿ ಸೋಮನಾಥಪುರದ ೧೨೬೮ ಹಾಗೂ ೧೨೭೬ರ ಶಾಸನಗಳನ್ನು ಉಲ್ಲೇಖಿಸಬಹುದಾಗಿದೆ. ವಿಜಯನಗರ ಕಾಲದ ನರಸೀಪುರ, ಮಾದಾಪುರ, ಕಲಿಯೂರು, ಸೋಮನಾಥಪುರ ಶಾಸನ ಹಾಗೂ ಮೈಸೂರು ಅರಸರ ಕಾಲದ ಬನ್ನೂರು, ನರಸೀಪುರ ಮುಂತಾದೆಡೆಯ ಶಾಸನಗಳಲ್ಲಿ ತಾಲೂಕಿನ ಕೃಷಿಗೆ ಸಂಬಂಧಿಸಿದಂತೆ ಮಹತ್ವದ ಅಂಶಗಳು ಲಭಿಸುತ್ತವೆ. ಸೋಮನಾಥಪುರದ ಚನ್ನಕೇಶವ ದೇವಾಲಯದ ಭಿತ್ತಿಯಲ್ಲಿರುವ, ಮುಸುಕಿನ ಜೋಳದ



ತೆನೆಯನ್ನು ಹೋಲುವ ಉಬ್ಬು ಕೆತ್ತನೆಯು ಬಹಳ ಜಿಜ್ಞಾಸೆಗೆ ಒಳಗಾಗಿದೆ. ಆದರೆ ಮುಸುಕಿನ ಜೋಳವನ್ನು ತಂದವರು ಪೋರ್ಚುಗಿಸರೆಂಬ ಅಭಿಪ್ರಾಯ ಬಹುಹಿಂದಿನಿಂದಲೂ ಚಾಲ್ತಿಯಲ್ಲಿದೆ. ತಲಕಾಡು–ಹೆಮ್ಮಿಗೆ ಬಳಿ ಇರುವ ಮಾಧವಮಂತ್ರಿ ಅಣೆಕಟ್ಟನ್ನು ಪೆರುಮಾಳದೇವ ದಂಡನಾಯಕನ ಮಗನಾದ ಮಾಧವದಂಡನಾಯಕನು ಸುಮಾರು ೧೩೪೧ರಲ್ಲಿ ನಿರ್ಮಿಸಿದ್ದು, ಈ ಕಟ್ಟೆಯ ಉಲ್ಲೇಖ ನಂತರದ (೧೬೩೩) ಶಾಸನಗಳಲ್ಲಿದೆ. ಅಲ್ಲದೇ ನರಸೀಪುರ (ದಳವಾಯಿ ಅಗ್ರಹಾರ) ತಾಮ್ರಶಾಸನದಲ್ಲಿ ತಾಲೂಕಿನ ಹತ್ತಾರು ಗ್ರಾಮಗಳ ಭೌಗೋಳಿಕ ವ್ಯಾಪ್ತಿ, ಗಡಿ–ಚಕ್ಬಂದಿ, ಬೆಟ್ಟ–ಗುಡ್ಡ, ಹಳ್ಳ–ಕೊಳ್ಳ, ಹೊಲ–ಗದ್ದೆ, ಕೆರೆ–ಕುಂಟೆ, ಗುಡಿ–ಗುಂಡಾರ–ಮಠಮಾನ್ಯ–ಭೂಮಾಲೀಕರ ಹೆಸರೂ ಸೇರಿದಂತೆ ವೈವಿಧ್ಯಮಯ ಅಂಶಗಳು ಕಂಡುಬರುತ್ತವೆ. ತಾಲೂಕಿನ ಶಾಸನಗಳಲ್ಲಿ ನವಣೆ, ಬತ್ತ, ಕಬ್ಬು, ಹತ್ತಿ ಬೆಳೆವ ಗದ್ದೆ, ಸೆಣಬು, ಬರಗ, ಸಜ್ಜೆ, ಹಾರಕ, ಎಣ್ಣೆಕಾಳುಗಳನ್ನು ಬೆಳೆಯುತ್ತಿದ್ದ ಹೊಲ, ಹೂ–ಹಣ್ಣು, ತೆಂಗು–ಕಂಗು ತರಕಾರಿ ಬೆಳೆಯುತ್ತಿದ್ದ ತೋಟಗಳ ಬಗ್ಗೆ ಉಲ್ಲೇಖವಿದ್ದು, ಕ್ವಚಿತ್ತಾಗಿ ಅಡವಿಗಳ ಪ್ರಸ್ತಾಪವೂ ಕಂಡು ಬರುತ್ತದೆ. ಜೋಳದ ಉಲ್ಲೇಖ ತಾಯೂರು ಶಾಸನದಲ್ಲಿ ಕಂಡು ಬಂದರೆ, ರಾಗಿಯ ಉಲ್ಲೇಖ ೧೧–೧೨ನೆಯ ಶತಮಾನದಿಂದೀಚಿನ ಶಾಸನಗಳಲ್ಲಿ ಕಾಣಸಿಗುತ್ತದೆ. ಹದಿನೇಳನೆಯ ಶತಮಾನದಲ್ಲಿ ರಚಿಸಲ್ಪಟ್ಟಿರುವ ಚಿಕ್ಕದೇವರಾಯ ವಂಶಾವಳಿಯಲ್ಲಿ ಸತ್ಯಗಾಲದ ಸಣ್ಣ, ಜೀರಿಗೆ ಸಣ್ಣ, ಕಸ್ತೂರಿ ರಾಜಾನ್ನ ಮುಂತಾದ ೧೪ ಜಾತಿಯ ಬತ್ತದ ಉಲ್ಲೇಖವಿದೆ. ಟಿಪ್ಪುಕಾಲದಲ್ಲಿ ರೇಷ್ಮೆ ಕೃಷಿ ಪರಿಚಯಿಸಲ್ಪಟ್ಟರೂ ಅದು ಹೆಚ್ಚು ಜನಪ್ರಿಯಗೊಂಡಿದ್ದು ೨೦ನೆಯ ಶತಮಾನದಿಂದೀಚೆಗೆ. ಸುಮಾರು ೧೮೦೦ರಲ್ಲಿ ನೆರೆಯ ಮೈಸೂರು, ನಂಜನಗೂಡು, ಕೊಳ್ಳೇಗಾಲ ತಾಲೂಕುಗಳೂ ಸೇರಿದಂತೆ ಈ ತಾಲೂಕಿನ ಮೂಲಕ ಹಾದುಹೋಗಿದ್ದ ಫ್ರಾನ್ಸಿಸ್ ಬುಕಾನನ್ನನ ವರದಿಯಿಂದ ಇತರೆಡೆಗಳಂತೆ ಈ ತಾಲೂಕಿನಲ್ಲೂ ಕೃಷಿ ಭೂಮಿಯನ್ನು ಹೊಲ, ಗದ್ದೆ, ಬಾಗಾಯ್ತು ಎಂದು ವಿಂಗಡಿಸಲಾಗಿದ್ದು, ರೈತರು ವರ್ಷದಲ್ಲಿ ರಬಿ–ಹೈನು (ಹಿಂಗಾರು) ಮತ್ತು ಕಾರು–ಖಾರೀಫ್ (ಮುಂಗಾರು) ಬೆಳೆಯನ್ನು ಪಡೆಯುತ್ತಿದ್ದು, ಗದ್ದೆಯಲ್ಲಿ ಬತ್ತ ಬೆಳೆಯುವುದು ಸಾಮಾನ್ಯವಾಗಿತ್ತೆಂದು ಗೊತ್ತಾಗುತ್ತದೆ. ಅಲ್ಲದೆ ಬತ್ತದ ಸಾಗುವಳಿಯಲ್ಲಿ ಅನುಸರಿಸುತ್ತಿದ್ದ ಬರಬತ್ತ, ಬೀಸುಬತ್ತ ಹಾಗೂ ನಾಟಿಬತ್ತ ವಿಧಾನಗಳನ್ನು ವಿವರಿಸುತ್ತಾ, ದೊಡ್ಡ, ಪುಟ್ಟ, ಬಿಳಿಸಣ್ಣ, ಸುಕದರೆ ಮುಂತಾದ ವಿವಿಧ ಜಾತಿಯ ಬತ್ತಗಳನ್ನು ಉಲ್ಲೇಖಿಸುವುದರ ಜೊತೆಗೆ ಕಣಜ, ಹುಡೆಗಳಲ್ಲಿ ದವಸ–ಧಾನ್ಯಗಳನ್ನು ಸಂಗ್ರಹಿಸಿಡುತ್ತಿದ್ದ ಅಂಶವನ್ನೂ ದಾಖಲಿಸಿದ್ದಾನೆ. ಮಿಗಿಲಾಗಿ ರಸತಳಿ ಹಾಗೂ ಪಟ್ಟಪಟ್ಟಿ ಜಾತಿಯ ಕಬ್ಬಿನ ಬೇಸಾಯ, ಹತ್ತಿ, ಉದ್ದು, ಹೆಸರು, ಅಲಸಂದೆ, ತಡಗುಣಿ, ಹುಚ್ಚೆಳ್ಳು, ಮುಂತಾದ ನೀರಾವರಿ ಬೆಳೆ; ರಾಗಿ, ಅವರೆ, ತೊಗರಿ, ಹಾರಕ, ನವಣೆ, ಸಾವೆ (ಶಾಮೆ), ಜೋಳ, ಹುರುಳಿ, ಕಡಲೆ, ಹರಳು ಮುಂತಾದ ಒಣಬೆಳೆ; ಬದನೆ, ಹೀರೆ, ಕುಂಬಳ, ಸೋರೆ, ಹಾಗಲ, ಬೆಂಡೆ, ಪಡವಲ, ಗೋರಿ, ಚಪ್ಪರದವರೆ ಸಿಹಿಗೆಣಸು, ಮುಂತಾದ ತರಕಾರಿಗಳ ತೆಂಗು, ಕಂಗು, ಅಡಕೆ, ಕಿತ್ತಳೆ, ಸೀಬೆ, ಬಾಳೆ, ದಾಳಿಂಬೆ, ಹಲಸು ಮಾವು ಮುಂತಾದ ಬಾಗಾಯ್ತು ಬೆಳೆಗಳನ್ನೂ ಉಲ್ಲೇಖಿಸುತ್ತಾನೆ.

**ಕೃಷಿಕ ಜನಸಂಖ್ಯೆ:** ೧೯೮೧ರ ಜನಗಣತಿಯ ಪ್ರಕಾರ ತಾಲೂಕಿನಲ್ಲಿದ್ದ ಒಟ್ಟು ೭೪,೮೧೨ ಮುಖ್ಯ ಕೆಲಸಗಾರರಲ್ಲಿ ೩೭,೧೪೨ (೪೯.೬೫ಶೇ.) ಜನ ಬೇಸಾಯಗಾರರು ಹಾಗೂ ೨೩,೫೦೫ (೩೧.೪೨ಶೇ.) ಕೃಷಿ ಕಾರ್ಮಿಕರು, ಗೃಹಕೈಗಾರಿಕೆ ಹಾಗೂ ಇತರ ಕೆಲಸಗಳಲ್ಲಿ ತೊಡಗಿದ್ದವರೂ ಸೇರಿದ್ದರು. ಅಲ್ಲದೇ ಸಂಚಿತ ಕೆಲಸಗಾರರಲ್ಲಿ ಕೃಷಿಕರು, ಕೃಷಿ ಕಾರ್ಮಿಕರು, ಗೃಹಕೈಗಾರಿಕೆ ಹಾಗೂ ಇತರೆ ಕಸುಬಿನ ಕೆಲಸಗಾರರೂ ಇದ್ದು, ಕೆಲಸರಹಿತ ವರ್ಗವೂ ಇತ್ತು. ೨೦೦೧ರ ಜನಗಣತಿಯ ವೇಳೆಗೆ ತಾಲೂಕಿನಲ್ಲಿದ್ದ ಒಟ್ಟು ೧,೦೮,೦೨೮ (೮೫.೩೫೭ ಪುರುಷರು ಹಾಗೂ ೨೨,೬೭೧ ಮಹಿಳೆ) ಕೆಲಸಗಾರರಲ್ಲಿ ೯೫೮೦೮ (೭೫.೩೩೬ ಪುರುಷರು + ೨೦,೪೭೨ ಮಹಿಳೆಯರು) ಜನ ಗ್ರಾಮೀಣ ಪ್ರದೇಶದಲ್ಲೂ ೧೨,೨೨೦ (೧೦,೦೨೧ ಪುರುಷರು + ೨,೧೯೯ ಮಹಿಳೆಯರು) ಜನ ನಗರಪ್ರದೇಶದಲ್ಲೂ ಇದ್ದರು. ಇವರಲ್ಲಿ ೮೨,೪೨೩ (೭೦,೭೫೨ ಪು + ೧೧,೬೭೧ ಮಹಿಳೆಯರು) ಜನ ಮುಖ್ಯ ಕೆಲಸಗಾರರಿದ್ದು, ಅವರಲ್ಲಿ ೭೧,೧೦೧ (೬೧,೨೩೨ ಪು + ೯,೮೬೯ ಮ) ಮಂದಿ ಗ್ರಾಮೀಣ ಪ್ರದೇಶದಲ್ಲೂ ೧೧,೩೨೨ (೯,೫೨೦ ಪು + ೧,೮೦೨ ಮ) ಜನ ನಗರಪ್ರದೇಶದಲ್ಲೂ ವಾಸಿಸುತ್ತಿದ್ದರು. ಇವರಲ್ಲಿದ್ದ ೩೫,೪೯೦ (೩೩,೬೯೮ ಪು + ೧,೭೯೨ ಮ) ಸಾಗುವಳಿದಾರರಲ್ಲಿ ೩೩,೨೧೭ (೩೧,೫೨೩ ಪು + ೧,೬೯೪ ಮ) ಮಂದಿ ಗ್ರಾಮೀಣ ಪ್ರದೇಶದಲ್ಲೂ ೨,೨೭೩ (೨,೧೭೫ ಪು + ೯೮ ಮ) ಮಂದಿ ನಗರಪ್ರದೇಶದಲ್ಲೂ ವಾಸಿಸುತ್ತಿದ್ದು, ತಾಲೂಕಿನಲ್ಲಿದ್ದ ೨೩,೦೭೪ (೧೬,೯೪೬ ಪಯ + ೬,೧೨೮ ಮ) ಕೃಷಿ ಕಾರ್ಮಿಕರಲ್ಲಿ ೨೦,೯೦೦ (೧೫,೪೭೪ ಪು + ೫,೪೨೬ ಮ) ಜನ ಗ್ರಾಮೀಣ ಪ್ರದೇಶದಲ್ಲೂ, ೨,೧೭೪ (೧,೫೨೨ ಪು+೬೫೨ ಮ) ನಗರ ಪ್ರದೇಶದಲ್ಲೂ ಇದ್ದರು. ಇದೇ ಅವಧಿಯಲ್ಲಿ ತಾಲೂಕಿನಲ್ಲಿದ್ದ ೧,೧೯ (೫೧೯ ಪು + ೫೯೦ ಮ) ಗೃಹ ಕೈಗಾರಿಕಾ ಕಾರ್ಮಿಕರಲ್ಲಿ ೮೭೧ (೩೭೬ ಪು + ೪೯೫ ಮ) ಮಂದಿ ಗ್ರಾಮೀಣ ಪ್ರದೇಶದಲ್ಲೂ, ೨೩೮ (೧೪೩ ಪು + ೯೫ ಮ) ಮಂದಿ ನಗರಪ್ರದೇಶದಲ್ಲೂ ಇದ್ದರು. ತಾಲೂಕಿನಲ್ಲಿದ್ದ ೨೩,೭೫೦ ಇತರೇ (೧೯೫೮೯ ಪು + ೩,೧೬೧ ಮ) ಕಾರ್ಮಿಕರಲ್ಲಿ ೧೬,೧೧೩ (೧೩,೯೦೯ ಪು + ೨,೨೦೪ ಮ) ಜನ ಗ್ರಾಮೀಣ ಪ್ರದೇಶದಲ್ಲೂ, ೬,೬೩೭ (೫,೬೮೦ ಪು + ೯೫೭ ಮ) ಜನ ನಗರಪ್ರದೇಶದಲ್ಲೂ ದುಡಿಯುತ್ತಿದ್ದರು. ತಾಲೂಕಿನ ಒಟ್ಟು ಕೆಲಸಗಾರರಲ್ಲಿದ್ದ ೨೫,೬೦೫ (೧೪,೬೦೫ ಪು + ೧೧,೦೦೦ ಮ) ಸಂಚಿತ ಕೆಲಸಗಾರರಲ್ಲಿ ೨೪,೭೦೭ (೧೪,೧೦೪ ಪು + ೧೦,೬೦೩ ಮ) ಮಂದಿ ಗ್ರಾಮೀಣ ಪ್ರದೇಶದಲ್ಲಿ ೮೯೮ (೫೦೧ ಪು + ೩೯೭ಮ) ಜನ ನಗರಪ್ರದೇಶದಲ್ಲೂ ಇದ್ದರು. ಅವರಲ್ಲಿ ೧೩೮೭ ಜನ ಸಾಗುವಳಿದಾರರು, ೨೧,೭೪೩ ಜನ ಕೃಷಿಕಾರ್ಮಿಕರು ೨೬೫ ಮಂದಿ ಗೃಹಕೈಗಾರಿಕಾ ಕಾರ್ಮಿಕರು, ೨,೨೧೫ ಮಂದಿ ಇತರ ಕಾರ್ಯಗಳಲ್ಲಿ ತೊಡಗಿದ್ದ ಕಾರ್ಮಿಕರೂ ಇದ್ದರು. ಅದೇ ಸಂದರ್ಭದಲ್ಲಿ ತಾಲೂಕಿನಲ್ಲಿದ್ದ ೧,೭೦,೯೭೭ (೫೬,೮೧೦ ಪು + ೧,೧೪,೧೬೭ ಮ) ಕೆಲಸರಹಿತ ಜನರಲ್ಲಿ ೧,೫೦,೦೩೧ (೫೦,೦೧೭ ಪು + ೧,೦೦,೦೧೪ ಮ) ಜನ ಗ್ರಾಮೀಣ ಪ್ರದೇಶದಲ್ಲೂ ೨೦,೯೪೬ (೬,೭೯೩ ಪು + ೧೪,೧೫೩ಮ) ಜನ ನಗರಪ್ರದೇಶದಲ್ಲೂ ನೆಲೆಸಿದ್ದರು.



**ಭೂ ಉಪಯೋಗ:** ತಾಲೂಕಿನಲ್ಲಿ ಲಭ್ಯವಿರುವ ಭೂಮಿಯನ್ನು ಉಪಯೋಗದ ದೃಷ್ಟಿಯಿಂದ ಅರಣ್ಯ, ಬಿತ್ತನೆ ಭೂಮಿ, ಕೃಷಿಯೇತರ ಭೂಮಿ, ಸಾಗುವಳಿಗೆ ಯೋಗ್ಯವಲ್ಲದ ಬಂಜರು ಭೂಮಿ,ಸಾಗುವಳಿ ಮಾಡಬಹುದಾದ ಬಂಜರು ಭೂಮಿ, ಗೋಮಾಳ, ಬೀಳುಭೂಮಿ, ತೋಪು, ಮುಂತಾಗಿ ವಿಭಜಿಸಬಹುದಾಗಿದೆ. ಅದರಂತೆ ೧೯೪೫–೪೬ರ ಸಾಲಿನಲ್ಲಿ ತಾಲೂಕಿನ ಒಟ್ಟು ಭೂವಿಸ್ತೀರ್ಣ ೨೩೬,೯೭ ಚ.ಮೈಲಿ ಇದ್ದು, ಅದರಲ್ಲಿ ೮೨,೮೪೩ ಎಕರೆಗಳಷ್ಟು ಜಮೀನು ಸಾಗುವಳಿಗೆ ಯೋಗ್ಯವಾಗಿದ್ದು, ಇದು ೬೮,೪೮೨ ಎಕರೆ ಒಣ ಬೇಸಾಯದ ಭೂಮಿ, ೧೨,೯೦೮ ಎಕರೆ ನೀರಾವರಿ ಭೂಮಿ ೧,೪೫೩ ಎಕರೆ ಬಾಗಾಯ್ತು ಭೂಮಿಯನ್ನು ಒಳಗೊಂಡಿತ್ತು. ಆ ಸಾಲಿನಲ್ಲಿ ಒಟ್ಟು ೮೦,೨೪೪ ಎಕರೆ (೬೫,೭೭೮ ಎಕರೆ ಒಣಭೂಮಿ, ೧೨,೦೦೮ ಎಕರೆ ನೀರಾವರಿ ಭೂಮಿ ಹಾಗೂ ೧,೪೫೮ ಎಕರೆ ಬಾಗಾಯ್ತು ಭೂಮಿ) ಭೂಮಿಯಲ್ಲಿ ಬಿತ್ತನೆ ಮಾಡಲಾಗಿತ್ತು. ಇದರಲ್ಲಿ ೧೬,೪೮೨ ಎಕರೆಗೆ ಬತ್ತ, ೨೦,೩೫೦ ಎಕರೆಗೆ ರಾಗಿ, ೨,೨೦೧ ಎಕರೆಗೆ ಕಬ್ಬು ೧೪,೫೬೦ ಎಕರೆಗೆ ಹುರುಳಿ, ೪೩೦ ಎಕರೆಯಲ್ಲಿ ಹತ್ತಿ, ೩,೪೭೩ ಎಕರೆಯಲ್ಲಿ ಎಣ್ಣೆಬೀಜ, ೧೧೮ ಎಕರೆಯಲ್ಲಿ ತೆಂಗು, ೫೨ ಎಕರೆಯಲ್ಲಿ ತಂಬಾಕು, ೧೦,೮೬೭ ಎಕರೆಯಲ್ಲಿ ಹಿಪ್ಪುನೇರಳೆ, ೩೧೦ ಎಕರೆಯಲ್ಲಿ ಹಣ್ಣು ಹಾಗು ೨೨,೫೯೦ ಎಕರೆಯಲ್ಲಿ ಜೋಳದ ಬಿತ್ತನೆ ಮಾಡಲಾಗಿತ್ತು. ಇದರಿಂದ ಆ ಸಮಯದಲ್ಲಿ ರಾಗಿ, ಜೋಳ, ಹುರುಳಿ, ಬತ್ತ, ಹಿಪ್ಪುನೇರಳೆ, ತಾಲೂಕಿನ ಪ್ರಮುಖ ಬೆಳೆಗಳಾಗಿದ್ದು, ಕಬ್ಬು, ಎಣ್ಣೆಬೀಜ ನಂತರದ ಸ್ಥಾನದಲ್ಲಿದ್ದು, ಹತ್ತಿ ತಂಬಾಕನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಅಂಶ ವೇದ್ಯವಾಗುತ್ತದೆ.

ತಾಲೂಕಿನಲ್ಲಿ ೧೯೯೧ರ ವೇಳೆಗೆ ಇದ್ದ ಒಟ್ಟು ೫೮,೬೭೨ ಹೆಕ್ಟೇರು ಭೂ ಪ್ರದೇಶವು ೫೬೮೨ ಹೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿ, ೩,೧೦೨ ಹೆ. ಸಾಗುವಳಿ ಮಾಡದಿರುವ ಇತರೆ ಬೀಳು ಭೂಮಿ ೧೧,೭೭೦ ಹೆ. ಬೀಳುಭೂಮಿ ಹಾಗೂ ಬಿತ್ತನೆಯಾಗಿರುವ ೩೭,೯೬೪ ಹೆ. ಭೂಮಿಯನ್ನೂ ಒಳಗೊಂಡಿತ್ತು.

೨೦೦೦–೦೧ರ ಸಾಲಿನಲ್ಲಿ ತಾಲೂಕಿನಲ್ಲಿದ್ದ ಒಟ್ಟು ೫೮,೬೭೨ ಹೆ. ಭೂಮಿಯಲ್ಲಿ ೬,೧೭೮ ಹೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿ, ೨,೮೯೮ ಹೆ. ಸಾಗುವಳಿ ಮಾಡದಿರುವ ಇತರೆ ಭೂಮಿ, ೨,೮೮೮ ಹೆ. ಬೀಳು ಭೂಮಿ, ೪೬,೫೫೪ ಹೆ. ನಿವ್ವಳ ಬಿತ್ತನೆ ಪ್ರದೇಶ ಹಾಗೂ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ೬,೮೧೧ ಹೆ. ಭೂಮಿ ಇದ್ದವು. ಅದೇ ೨೦೦೭–೦೮ ರ ಸಾಲಿನಲ್ಲಿ ತಾಲೂಕಿನಲ್ಲಿದ್ದ ೫೮,೬೭೨ ಹೆ. ಭೂ ಪ್ರದೇಶದಲ್ಲಿ ೬,೧೯೫ ಹೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿ ೨,೮೪೮ ಹೆ. ಸಾಗುವಳಿ ಮಾಡದಿರುವ ಇತರೆ ಭೂಮಿ, ೨,೯೩೬ ಹೆ. ಬೀಳು ಭೂಮಿ, ಇದ್ದು, ಉಳಿದ ೫೧,೮೭೯ ಹೆ. ಬಿತ್ತನೆಯಾದ ಒಟ್ಟು ಭೂಮಿ (ಒಂದು ಬಾರಿ ಬಿತ್ತನೆಯಾಗಿರುವ ೪೬,೫೩೯ ಹೆ.ಭೂಮಿ ಹಾಗೂ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ೫,೩೪೦ ಹೆ.)ಯಾಗಿತ್ತು.

**ಭೂಹಿಡುವಳಿ ಪ್ರಮಾಣ :** ತಾಲೂಕಿನಲ್ಲಿರುವ ಭೂ ಹಿಡುವಳಿದಾರರನ್ನು ಇತರೆಡೆಗಳಂತೆ ೧) ಒಂದು ಹೆ.ವರೆಗಿನ ಅತಿ ಸಣ್ಣ ಭೂ ಹಿಡುವಳಿದಾರರು, ೨) ೧-೨ ಹೆ.ವರೆಗಿನ ಸಣ್ಣ ಭೂಹಿಡುವಳಿದಾರರು, ೩) ಎರಡರಿಂದ – ನಾಲ್ಕು ಹೆ.ವರೆಗಿನ ಅರೆಮಧ್ಯಮ ಭೂಹಿಡುವಳಿದಾರರು ೪) ನಾಲ್ಕರಿಂದ ಹತ್ತು ಹೆ.ವರೆಗಿನ ಮಧ್ಯಮ ಭೂ ಹಿಡುವಳಿದಾರರು ಹಾಗೂ ೧೦ ಹೆ.ಗಿಂತ ಹೆಚ್ಚು ಭೂಮಿಯನ್ನು ಹೊಂದಿರುವ ದೊಡ್ಡ ಭೂಹಿಡುವಳಿದಾರರೆಂದು ಐದು ಗುಂಪಾಗಿ ವರ್ಗೀಕರಿಸಲಾಗಿದೆ. ೨೦೦೧ರ ಕೃಷಿ ಗಣತಿಯಂತೆ ತಾಲೂಕಿನಲ್ಲಿ ಮೊದಲ ವರ್ಗಕ್ಕೆ ಸೇರಿದ ೫೧,೮೯೫ ಹಿಡುವಳಿದಾರರ ನಿಯಂತ್ರಣದಲ್ಲಿ ೧೮,೩೫೬ ಹೆ; ಎರಡನೆಯ ವರ್ಗಕ್ಕೆ ಸೇರಿದ ೮,೩೭೧ ಹಿಡುವಳಿದಾರರ ಹಿಡಿತದಲ್ಲಿ ೧೧,೩೬೬ ಹೆ; ಮೂರನೆಯ ವರ್ಗಕ್ಕೆ ಸೇರಿದ ೩,೦೩೮ ಹಿಡುವಳಿದಾರರ ಸುಬರ್ದಿನಲ್ಲಿ ೭,೯೦೨ ಹೆ; ನಾಲ್ಕನೆಯ ವರ್ಗಕ್ಕೆ ಸೇರಿದ ೭೧೫ ಹಿಡುವಳಿದಾರರ ಕೈಯಲ್ಲಿ ೩,೮೪೧ ಹೆ; ಹಾಗೂ ೩೪ ಹಿಡುವಳಿದಾರರ ಅಂಕಿತದಲ್ಲಿ ೪೯೧ ಹೆ. ಜಮೀನುಗಳು ಇದ್ದವು. ಈ ಅಂಕಿ ಅಂಶಗಳಿಂದ ಮೊದಲ ವರ್ಗಕ್ಕೆ ಸೇರಿದ ಅತೀ ಸಣ್ಣ ಹಿಡುವಳಿದಾರರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಅಧಿಕಗೊಂಡಿದ್ದು, ಜಿಲ್ಲೆಗೆ ಮೊದಲ ಸ್ಥಾನದಲ್ಲಿದ್ದರೆ, ಅವರ ನಿಯಂತ್ರಣಕ್ಕೊಳಪಟ್ಟಿದ್ದ ಭೂವಿಸ್ತೀರ್ಣದ ದೃಷ್ಟಿಯಿಂದ ನೆರೆಯ ನಂಜನಗೂಡು ತಾಲೂಕು ಅಗ್ರಸ್ಥಾನದಲ್ಲಿದ್ದರೆ, ನಂತರದ ಸ್ಥಾನದಲ್ಲಿ ನರಸೀಪುರ ತಾಲೂಕು ಇತ್ತು. ಆದರೆ ಉಳಿದ ವರ್ಗಕ್ಕೆ ಸೇರಿದ ಭೂಹಿಡುವಳಿದಾರರ ಅಂಕಿಅಂಶಗಳಲ್ಲಿ ಇಳಿಕೆ ಕ್ರಮ ಮುಂದುವರಿದಿದ್ದು, ಗಮನಾರ್ಹವಾಗಿತ್ತು. ೨೦೦೫-೦೬ರ ಕೃಷಿ ಗಣತಿಯಂತೆ ತಾಲೂಕಿನಲ್ಲಿ ೧) ಅತಿ ಸಣ್ಣ ಹಿಡುವಳಿದಾರರ ಸಂಖ್ಯೆ ೫೦,೬೭೦ (ವಿ. ೧೮೯೭೬ ಹೆ.), ೨) ಸಣ್ಣ ಹಿಡುವಳಿದಾರರ ಸಂಖ್ಯೆ ೭,೬೭೨ (ವಿ. ೧೦೭೫೩ ಹೆ.), ೩) ಅರೆ ಮಧ್ಯಮ ಹಿಡುವಳಿದಾರರು ೨,೭೪೩ (ವಿ. ೭೨೬೨), ೪) ಮಧ್ಯಮ ಹಿಡುವಳಿದಾರರು ೬೧೭ (ವಿ. ೩೨೮೩ ಹೆ.), ೫) ದೊಡ್ಡ ಹಿಡುವಳಿದಾರರು ೩೨ (ವಿ. ೪೫೪ ಹೆ.) ಇದ್ದು, ಇವರ ಒಟ್ಟು ಸಂಖ್ಯೆ ೬೧,೭೩೪ (ವಿ. ೪೦೭೫೮ ಹೆ.) ಆಗಿತ್ತು.

**ಕೃಷಿ ಋತುಮಾನ ವಲಯ :** ಕೃಷಿ ಋತುಮಾನ ದೃಷ್ಟಿಯಿಂದ ಜಿಲ್ಲೆಯನ್ನು ಎರಡು ವಲಯಗಳನ್ನಾಗಿ ವಿಭಜಿಸಲಾಗಿದ್ದು, ಅದರಲ್ಲಿ ದಕ್ಷಿಣ ಒಣ ಬೇಸಾಯ ವಲಯ (ಕಾರ್) ವ್ಯಾಪ್ತಿಗೆ ನರಸೀಪುರ ತಾಲೂಕು ವಿಶೇಷವಾಗಿ ಒಳಪಟ್ಟಿದ್ದು, ತಾಲೂಕಿನ ವಾಡಿಕೆ ಮಳೆ ಪ್ರಮಾಣ(೭೧೮ ಮಿ.ಮೀ)ದ ಶೇಕಡಾ ಅರ್ಧಕ್ಕೂ ಹೆಚ್ಚಿನ ಭಾಗದ ಮಳೆ ಖಾರೀಫ್ (ಮುಂಗಾರು) ಋತುವಿನಲ್ಲಿ ಆಗುತ್ತಿದ್ದು, ಹೆಚ್ಚಿನ ಭಾಗ ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದರೂ ಅಲ್ಲಲ್ಲಿ ಕಪ್ಪು ಮಣ್ಣು ಕಂಡು ಬರುತ್ತದೆ. ರಾಗಿ, ಜೋಳ, ಭತ್ತ, ಕಬ್ಬು, ಹಾಗೂ ದ್ವಿದಳಧಾನ್ಯಗಳು ಇಲ್ಲಿನ ಪ್ರಮುಖ ಬೆಳೆಗಳಾಗಿವೆ.

**ಮಣ್ಣು :** ತಾಲೂಕಿನಲ್ಲಿ ಲಭ್ಯವಿರುವ ಮಣ್ಣನ್ನು ಪ್ರಧಾನವಾಗಿ ಕೆಂಪು ಗೋಡುಮಣ್ಣು (ಗ್ರಾನೈಟ್ ಹಾಗೂ ನೀಸ್ ಮೂಲದ) ಮರಳುಮಿಶ್ರಿತ ಕೆಂಪುಮಣ್ಣು ಹಾಗೂ ಕಪ್ಪುಮಣ್ಣು ಎಂದು ಹೆಸರಿಸಬಹುದಾಗಿದೆ. ತಾಲೂಕಿನಲ್ಲಿರುವ ಕೆಂಪು ಗೋಡು ಮಣ್ಣು ತಿಳಿ,



ಅಚ್ಚ ಕೆಂಪು ಕಂದು ಹಾಗೂ ಅಚ್ಚ ಕಂದು ವರ್ಣಗಳಿಂದ ಕೂಡಿದ್ದು, ಇದಕ್ಕೆ ನೀರನ್ನು ಬಸಿಯುವ ಗುಣವಿದ್ದರೂ ತಳಪದರದಲ್ಲಿ ಸುಣ್ಣದ ಹರಳನ್ನು ಹೊಂದಿರುವುದಿಲ್ಲ. ಕಪ್ಪುಮಣ್ಣು ತಳದಲ್ಲಿ ಸುಣ್ಣದ ಹರಳನ್ನು ಹೊಂದಿದ್ದು, ಹೆಚ್ಚು ನೀರನ್ನು ಸುದೀರ್ಘ ಕಾಲ ಹೀರಿಟ್ಟುಕೊಳ್ಳುವ ಮೂಲಕ ಹೆಚ್ಚು ತೇವಾಂಶವನ್ನು ಹೊಂದಿರುತ್ತದೆ. ತಾಲೂಕಿನ ಮಣ್ಣಿನಲ್ಲಿ ಅಲ್ಕಲೈನ್ ಅಂಶವು ಅಧಿಕವಾಗಿದ್ದರೂ ಕರಗುವ ಲವಣಾಂಶವು ಸಾಧಾರಣ ಮಟ್ಟದಲ್ಲಿದೆ. ರಸಾಯನಿಕ ಅಂಶವು ಹೆಚ್ಚಿನ ಪ್ರಮಾಣದಲ್ಲಿದ್ದರೂ ಗಂಧಕಾಂಶವು ಗೌಣ ಪ್ರಮಾಣದಲ್ಲಿದ್ದು, ಪೊಟಾಷಿಯಂನ ಪ್ರಮಾಣದಲ್ಲಿ ವ್ಯತ್ಯಾಸವಿರುತ್ತದೆ. ನಂಜನಗೂಡಿನಲ್ಲಿ ೧೯೮೧ರಿಂದ ಕಾರ್ಯನಿರ್ವಹಿಸುತ್ತಿರುವ ಪ್ರಾದೇಶಿಕ ಮಣ್ಣು ಆರೋಗ್ಯ ಕೇಂದ್ರದಲ್ಲಿ ತಾಲೂಕಿನ ರೈತರು ತಮ್ಮ ತಮ್ಮ ಜಮೀನಿನ ಮಾದರಿ ಮಣ್ಣನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಬಹುದಾಗಿದೆ. ಈ ಕೇಂದ್ರವು ವರ್ಷದಲ್ಲಿ ಸುಮಾರು ೩೦,೦೦೦ ಮಾದರಿ ಮಣ್ಣನ್ನು ಪರೀಕ್ಷಿಸುವ ಸಾಮರ್ಥ್ಯವನ್ನು ಹೊಂದಿದೆ. ಇದೊಂದು ವೈಜ್ಞಾನಿಕ ಪದ್ಧತಿಯಾಗಿದ್ದು, ಮಣ್ಣಿನ ಭೂಫಲವತ್ತತೆ ಹಾಗೂ ಬೆಳೆಗಳಿಗೆ ದೊರೆಯುವ ಪೋಷಕಾಂಶಗಳನ್ನು ತಿಳಿದು, ಅದಕ್ಕನುಗುಣವಾಗಿ ಮಣ್ಣಿನಲ್ಲಿರುವ ಕೊರತೆಯನ್ನು ಸೂಕ್ತ ರಸಗೊಬ್ಬರಗಳನ್ನು ಅಗತ್ಯ ಪ್ರಮಾಣದಲ್ಲಿ ಉಪಯೋಗಿಸುವ ಮೂಲಕ ಸರಿದೂಗಿಸಲು ನೆರವಾಗುತ್ತದೆ. ಅಲ್ಲದೇ ಸಂಚಾರಿ ಮಣ್ಣು ಆರೋಗ್ಯ ಕೇಂದ್ರಗಳು ರೈತರ ಮಣ್ಣು ಮಾದರಿಗಳನ್ನು ಸ್ಥಳದಲ್ಲೇ ವಿಶ್ಲೇಷಿಸಿ, ಸೂಕ್ತ ಸಮತೋಲನ ರಸಗೊಬ್ಬರದ ಬಳಕೆಗೆ ಸಲಹೆ ನೀಡುತ್ತವೆ. ಅಲ್ಲದೇ ನೀರು ಮಾದರಿಗಳನ್ನು ವಿಶ್ಲೇಷಿಸಿ ಸಲಹೆ ನೀಡಲಾಗುತ್ತದೆ. ಮಿಗಿಲಾಗಿ ಸುಣ್ಣ ಹಾಗೂ ಜಿಪ್ಸಂ ಮಾದರಿಗಳನ್ನು ವಿಶ್ಲೇಷಿಸಿ ಸಲಹೆ ನೀಡುವುದುಂಟು.

ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳ ಅಭಿವೃದ್ಧಿಗಾಗಿ, ಕೇಂದ್ರ ಸರ್ಕಾರದ ನೀರಾವರಿ ಆಯೋಗದ (೧೯೭೨) ಸಲಹೆಯಂತೆ, ೧೯೭೪ರಲ್ಲಿ ರಾಜ್ಯ ಸರ್ಕಾರವು ಕಾಡಾ ಜಲಾನಯನ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸುವ ಮೂಲಕ ಗರಿಷ್ಟ ನೀರಾವರಿ ಸೌಲಭ್ಯವನ್ನು ಪಡೆಯಲು ಪೂರಕವಾಗಿ ಬೃಹತ್ ಹಾಗೂ ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಟಾನಕ್ಕೆ ತರಲು ಮುಂದಾಯಿತು. ಅನಂತರದಲ್ಲಿ ಸರ್ಕಾರದ ಆಶಯದಂತೆ ಪ್ರಾಧಿಕಾರವು ಕೃಷಿ, ನೀರಾವರಿ, ತೋಟಗಾರಿಕೆ, ಮೀನುಗಾರಿಕೆ, ಅರಣ್ಯ, ಪಶುಸಂಗೋಪನೆ, ರೇಷ್ಮೆ, ಸಹಕಾರ, ಹಣಕಾಸು ಸಂಸ್ಥೆ, ಮುಂತಾದ ವಿವಿಧ ಇಲಾಖೆಗಳ ನೆರವಿನೊಂದಿಗೆ ಕಾವೇರಿ ಜಲಾನಯನ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ.

೧೯೮೦ರ ಕಾಯ್ದೆಯನ್ವಯ ಜಲಾನಯನ ಅಭಿವೃದ್ಧಿ ಪ್ರಾಧಿಕಾರಕ್ಕೆ ಸ್ವಾಯತ್ತತೆಯನ್ನು ನೀಡಲಾಯಿತು. ಈ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ನರಸೀಪುರ ತಾಲೂಕು ಕೂಡ ಒಳಪಡುತ್ತದೆ. ಜಲಾನಯನಾಭಿವೃದ್ಧಿ ಪ್ರಾಧಿಕಾರವು ಜಲ ಹಾಗೂ ನೆಲದ ಸಂರಕ್ಷಣೆ, ಜಮೀನಿನಲ್ಲಿ ನೀರಾವರಿ ಹಾಗೂ ಬಸಿ ಕಾಲುವೆಗಳ ನಿರ್ಮಾಣ, ನೀರಿನ ವ್ಯವಸ್ಥಿತ ವಿತರಣೆಗೆ ವಾರಾಬಂದಿ ವ್ಯವಸ್ಥೆಯ ನಿರ್ವಹಣೆ, ಅಗತ್ಯಕ್ಕನುಗುಣವಾಗಿ

ಸೂಕ್ತ ಬೆಳೆ ನೀತಿಯನ್ನು ಜಾರಿಗೊಳಿಸುವುದೇ ಮುಂತಾದ ಪ್ರಧಾನ ಕಾರ್ಯಗಳನ್ನು ನಿರ್ವಹಿಸುತ್ತದೆ.

**ಗೊಬ್ಬರ :** ರೈತರು ಬಹು ಹಿಂದಿನಿಂದಲೂ ಸಾಂಪ್ರದಾಯಿಕವಾಗಿ ಹಿತ್ತಲುಗೊಬ್ಬರ, ಹಸಿರುಗೊಬ್ಬರಗಳನ್ನು ಬಳಸುವುದರ ಜೊತೆಗೆ, ದನ, ಕುರಿ, ಆಡು ಮುಂತಾದ ಪ್ರಾಣಿಗಳ ಸಗಣಿ–ಇಕ್ಕೆಯನ್ನೂ ಕೃಷಿ ಜಮೀನಿಗೆ ಗೊಬ್ಬರವಾಗಿ ಬಳಸುವ ಮೂಲಕ ಹೆಚ್ಚಿನ ಇಳುವರಿ ಪಡೆಯುವುದು ಸರ್ವೇ ಸಾಮಾನ್ಯವಾಗಿತ್ತು. ಈ ಸಂಬಂಧ ಶಾಸನಗಳಲ್ಲಿ ತಿಪ್ಪಿ ಸುಂಕದ ಉಲ್ಲೇಖವೂ ದೊರೆಯುತ್ತಿದ್ದು, ಹಿತ್ತಲಿನಲ್ಲಿ ತಿಪ್ಪೆಗುಂಡಿಯನ್ನು ಹೊಂದಿದ್ದವರು ಅದಕ್ಕಾಗಿ ಸುಂಕ ನೀಡಬೇಕಾಗಿದ್ದು, ಅದೂ ಕೂಡ ಪ್ರಮುಖ ಸುಂಕವಾಗಿತ್ತು. ಅಲ್ಲದೇ ಕೆರೆಯ ಹೂಳನ್ನು ಎತ್ತಿದಾಗ ಬರುವ ಗೋಡು ಮಣ್ಣನ್ನು ಬೇಸಿಗೆಯಲ್ಲಿ ತಮ್ಮ ತಮ್ಮ ಹೊಲಗಳಿಗೆ ಸಾಗಿಸಿಕೊಳ್ಳುವುದೂ ಸಾಮಾನ್ಯವಾಗಿತ್ತು. ಜೊತೆಗೆ ಕೆಡವಿದ ಹಳೆ ಮನೆಯ ಮಣ್ಣನ್ನು ಜಮೀನಿನ ಫಲವತ್ತತೆಯನ್ನು ವೃದ್ಧಿಸಲು ಬಳಸಿಕೊಳ್ಳಲಾಗುತ್ತಿತ್ತು. ಆದರೆ ಕ್ರಮೇಣ ನೀರಾವರಿ ಸೌಕರ್ಯದ ಸುಧಾರಣೆ ಹಾಗೂ ಅಧಿಕ ಇಳುವರಿ ನೀಡುವ ತಳಿಗಳ ಆಗಮನದೊಂದಿಗೆ ತಾಲೂಕಿನಲ್ಲೂ ರಾಸಾಯನಿಕ ಗೊಬ್ಬರಗಳ ಬಳಕೆಗೆ ಸಂಬಂಧಿಸಿದಂತಹ ಗೊಬ್ಬರ ಬಳಕೆ ಪ್ರಚಾರ ಕಾರ್ಯಕ್ರಮವು ೧೯೮೦–೮೧ರ ಸಾಲಿನಿಂದ ಅಧಿಕಗೊಳ್ಳುವುದರೊಂದಿಗೆ, ೧೯೯೧–೯೨ ರ ಸಾಲಿನಲ್ಲಿ ತಾಲೂಕಿನಲ್ಲಿ ಒಟ್ಟು ೭,೪೦೧ ಟನ್ (೩,೩೪೮ ಮೆಟ್ರಿಕ್ ಟನ್ ಸಾರಜನಕ (ಎನ್) ೧,೯೯೮ ಟನ್ ರಂಜಕ (ಪಿ) ಹಾಗೂ ೨೦೫೫ ಟನ್ ಪೊಟ್ಯಾಸ್ (ಕೆ) ನಷ್ಟು ರಾಸಾಯನಿಕ ಗೊಬ್ಬರವನ್ನು ಬಳಸಲಾಗಿದ್ದು, ಜಿಲ್ಲೆಯಲ್ಲೇ ಅತ್ಯಂತ ಹೆಚ್ಚು ರಾಸಾಯನಿಕ ಗೊಬ್ಬರವನ್ನು ಬಳಸಿದ ತಾಲೂಕುಗಳಲ್ಲಿ ಎರಡನೆಯ ಸ್ಥಾನದಲ್ಲಿ ಈ ತಾಲೂಕಿದ್ದು, ಕೃಷ್ಣರಾಜನಗರ ತಾಲೂಕು ಅಗ್ರಸ್ಥಾನದಲ್ಲಿತ್ತು. ಅದೇ ೨೦೦೦–೦೧ರ ಸಾಲಿನಲ್ಲಿ ಇದು ಕ್ರಮವಾಗಿ ೬,೧೬೧ (೪,೧೦೮,೧೧೫೮ ಹಾಗೂ ೮೯೫)ಮೆ.ಟನ್‌ಗಳಾಗಿತ್ತು. ೨೦೦೪–೦೫ರ ಸಾಲಿನಲ್ಲಿ ಕ್ರಮವಾಗಿ ೫,೦೫೨ (೩,೩೪೬, ೯೦೩ ಹಾಗೂ ೮೦೩) ಮೆ.ಟನ್‌ಗಳಾಗಿತ್ತು. ಅದೇ ೨೦೦೮–೦೯ರ ಸಾಲಿನಲ್ಲಿ ೨,೯೨೨ ಟನ್ ಸಾರಜನಕ, ೧೧೦೦ ಟನ್ ರಂಜಕ, ಹಾಗೂ ೧,೮೩೫ ಟನ್ ಪೊಟಾಷ್ ರಾಸಾಯನಿಕ ಗೊಬ್ಬರವನ್ನು ಬಳಸಲಾಗಿತ್ತು. ಕೇವಲ ರಾಸಾಯನಿಕ ಗೊಬ್ಬರದ ಬಳಕೆಯಿಂದ ಉಂಟಾಗುವ ದುಷ್ಪರಿಣಾಮದ ಬಗ್ಗೆ ಇತ್ತೀಚೆಗೆ ತಾಲೂಕಿನ ರೈತರಲ್ಲಿ ಅರಿವುಂಟಾಗುತ್ತಿದೆ.

**ಕೃಷಿ ಸಲಕರಣೆಗಳು :** ಕೃಷಿಗೆ ಸಂಬಂಧಿಸಿದಂತೆ ತಾಲೂಕಿನಲ್ಲಿ ಬಳಕೆಯಲ್ಲಿರುವ ಉಪಕರಣಗಳು ವೈವಿಧ್ಯತೆಯಿಂದ ಕೂಡಿವೆ. ೧೯೮೩ರ ವೇಳೆಗೆ ೧೫,೬೬೫ ಮರದ ನೇಗಿಲು, ೫೯೮೪ ಕಬ್ಬಿಣದ ನೇಗಿಲು, ೬,೧೯೫ ಬಂಡಿ, ೪೨೩ ಪಂಪ್‌ಸೆಟ್, ೨೦ ಟ್ರಾಕ್ಟರ್ ಹಾಗೂ ೫,೮೯೫ ಇತರೇ ಕೃಷಿ ಉಪಕರಣಗಳು ತಾಲೂಕಿನಲ್ಲಿ ಬಳಕೆಯಾಗುತ್ತಿದ್ದವು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೧೬೭೦ ಟ್ರಾಕ್ಟರುಗಳು ತಾಲೂಕಿನಲ್ಲಿದ್ದವು.



ತಾಲೂಕಿನಲ್ಲಿ ಮಳೆ ಆಧಾರಿತ ಮುಂಗಾರು ಹಾಗೂ ಹಿಂಗಾರು ಬೆಳೆ ತೆಗೆಯುವ ಪದ್ಧತಿ ರೂಢಿಯಲ್ಲಿದೆಯಾದರೂ, ಕೆಲವೊಮ್ಮೆ ಮುಂಗಾರು ಬೆಳೆ ಬೆಳೆಯದಿದ್ದರೂ ಯಾವುದೇ ಕಾರಣಕ್ಕೂ ಹಿಂಗಾರು ಬೆಳೆಯನ್ನು ಕಳೆದುಕೊಳ್ಳಲು ರೈತ ಇಷ್ಟಪಡುವುದಿಲ್ಲ. ಮುಂಗಾರಿನಲ್ಲಿ ರಾಗಿ ಹಾಕಿದರೆ, ಹಿಂಗಾರಿನಲ್ಲಿ ಬತ್ತ ಹಾಗೂ ಇತರ ಧಾನ್ಯಗಳನ್ನು ಬೆಳೆಯುವುದು ಸಾಮಾನ್ಯ ವಾಡಿಕೆಯಾಗಿತ್ತು. ಬತ್ತಕ್ಕೆ ಸಂಬಂಧಿಸಿದಂತೆ ಕಾರ್ತಿಕ ಬತ್ತ ಹಾಗೂ ವೈಶಾಖದ ಬತ್ತ ಎಂಬ ಎರಡು ಬೆಳೆಗಳು ರೂಢಿಯಲ್ಲಿದ್ದು, ಮೊದಲಿನದನ್ನು ಜುಲೈ–ಡಿಸೆಂಬರ್ ನಡುವೆ ಬೆಳೆದರೆ, ಎರಡನೆಯದನ್ನು ಡಿಸೆಂಬರ್–ಮೇ ಅವಧಿಯಲ್ಲಿ ಬೆಳೆಯಲಾಗುತ್ತಿತ್ತು. ಹಿಂದೂ ಪಂಚಾಂಗದ ಪ್ರಕಾರ ಚೈತ್ರದಿಂದ ಫಾಲ್ಗುಣ ಮಾಸದವರೆಗಿನ ವರ್ಷವನ್ನು ೨೭ ಮಳೆ ನಕ್ಷತ್ರಗಳನ್ನಾಧರಿಸಿ ವಿಭಜಿಸಲಾಗಿದ್ದು, ಪ್ರತಿ ನಕ್ಷತ್ರವನ್ನು ನಾಲ್ಕು ಪಾದಗಳಾಗಿ ಪುನರ್‌ವಿಂಗಡಿಸಲಾಗಿದ್ದು, ಇದನ್ನು ಆಧರಿಸಿ, ರೈತರು ಬೇಸಾಯವನ್ನು ಕೈಗೊಳ್ಳುವುದು ವಾಡಿಕೆಯಲ್ಲಿದೆ. ಕೆರೆ–ಕಾಲುವೆ ಬಾವಿ ಪಂಪ್‌ಸೆಟ್ ನೀರಾವರಿ ಸೌಲಭ್ಯಗಳ ಲಭ್ಯತೆಯಿಂದಾಗಿ ಇಂದು ವರ್ಷದುದ್ದಕ್ಕೂ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಸುದಾರಿತ ತಳಿ, ಯಂತ್ರಾಧಾರಿತ ಕೃಷಿ ವಿಧಾನಗಳಿಂದಾಗಿ ಬೇಸಾಯ ಕ್ರಮವೂ ಸುಧಾರಿಸಿದ್ದು, ಮಳೆ ನಕ್ಷತ್ರಗಳು ಜನಮಾನಸದಿಂದ ಮರೆಯಾಗುತ್ತಿವೆ.

**ಪ್ರಮುಖ ಬೆಳೆಗಳು :** ಬತ್ತ, ಕಬ್ಬು, ರಾಗಿ, ಎಣ್ಣೆಬೀಜ ಹಾಗೂ ಹಿಪ್ಪುನೇರಳೆ ತಾಲೂಕಿನ ಪ್ರಮುಖ ಬೆಳೆಗಳಾಗಿವೆ. ೨೦೦೭–೦೮ರ ಸಾಲಿನಲ್ಲಿ ತಾಲೂಕಿನ ೩೪,೧೫೫ ಹೆ. ಭೂಮಿಯಲ್ಲಿ ವಿವಿಧ ಏಕದಳಧಾನ್ಯ ಹಾಗೂ ಉಪತೃಣ ಬೆಳೆಗಳನ್ನೂ, ೮,೧೬೫ ಹೆ. ಪ್ರದೇಶದಲ್ಲಿ ವಿವಿಧ ದ್ವಿದಳಧಾನ್ಯಗಳನ್ನೂ, ೧,೯೮೫ ಹೆ. ಜಮೀನಿನಲ್ಲಿ ವಿವಿಧ ಎಣ್ಣೆಕಾಳುಗಳನ್ನೂ, ೧,೦೫೨ ಹೆ.ನಲ್ಲಿ ವಿವಿಧ ಹಣ್ಣುಗಳನ್ನು ೨೦೨ ಹೆ.ನಲ್ಲಿ ವಿವಿಧ ತರಕಾರಿಗಳನ್ನು ೨೦೨೭ ಹೆ.ನಲ್ಲಿ ಕಬ್ಬನ್ನೂ ೪,೨೯೧ ಹೆ.ನಲ್ಲಿ ಇತರೇ ಆಹಾರೇತರ ಬೆಳೆಗಳನ್ನೂ ಬೆಳೆಯಲಾಗಿತ್ತು.

**ಬತ್ತ :** ಜಿಲ್ಲೆಯಲ್ಲಿ ಬತ್ತ ಬೆಳೆಯುವ ಪ್ರಮುಖ ತಾಲೂಕುಗಳಲ್ಲಿ ನರಸೀಪುರ ತಾಲೂಕಿಗೆ ೨೦೦೭–೦೮ರ ಸಾಲಿನಲ್ಲಿ ಮೊದಲ ಸ್ಥಾನವಿತ್ತು. ತಾಲೂಕಿನಲ್ಲಿ ಕಾಲುವೆ, ಕೆರೆ ಹಾಗೂ ಪಂಪ್‌ಸೆಟ್ ನೀರಾವರಿ ಸೌಲಭ್ಯವಿರುವೆಡೆಯಲ್ಲಿ ಬತ್ತವನ್ನು ವಿಶೇಷವಾಗಿ ಬೆಳೆಯಲಾಗುತ್ತದೆ. ಜಯ, ವಾಣಿ, ಸೋನಾ, ಐಇಟಿ ೨೨೫೪, ೨೮೨೦, ಪುಷ್ಪ, ಮಧು, ಮಂಗಳಾ, ಪ್ರಗತಿ, ಮಂಡ್ಯವಾಣಿ ಮುಂತಾದ ಬತ್ತದ ತಳಿಗಳನ್ನು ಹಿಂದೆ ತಾಲೂಕಿನಲ್ಲಿ ಬಿತ್ತಲಾಗುತ್ತಿತ್ತು. ಅಧಿಕ ಇಳುವರಿಯ ಸುಧಾರಿತ ತಳಿಗಳ ಬಳಕೆ ೧೯೬೬–೬೭ರಿಂದ ತಾಲೂಕಿನಲ್ಲಿ ಅಧಿಕಗೊಂಡು ಕೃಷಿ ಉತ್ಪಾದನೆಯಲ್ಲಿ ಪ್ರಗತಿಯುಂಟಾಯಿತು. ಅದರಂತೆ ೧೯೮೫–೮೬ನೇ ಸಾಲಿನಲ್ಲಿ ಅಧಿಕ ಇಳುವರಿ ನೀಡುವ ಬತ್ತದ ತಳಿಗಳನ್ನು ತಾಲೂಕಿನ ೧೧,೦೪೮ ಹೆ. ಜಮೀನಿನಲ್ಲಿ ನೆಟ್ಟು ಅಧಿಕ ಉತ್ಪನ್ನವನ್ನು ಪಡೆಯಲಾಗಿತ್ತು. ಸುಧಾರಿತ ಬೇಸಾಯದಡಿ ಜಯ ಭತ್ತ, ಹೆ.ರಿಗೆ ೭೫ ಕ್ವಿಂಟಾಲ್ ಇಳುವರಿ ನೀಡಿದರೆ, ಐ.ಆರ್.೨೦ ಹೆಕ್ಟೇರಿಗೆ ೬೦ ಕ್ವಿಂಟಾಲ್

ಹಾಗೂ ಇತರೆ ತಳಿಗಳು ಹೆಕ್ಟೇರಿಗೆ ೫೦ ಕ್ವಿಂಟಾಲ್ ಇಳುವರಿ ನೀಡುತ್ತಿದ್ದವು. ಅದೇ ೧೯೯೬–೯೭ನೇ ಸಾಲಿನಲ್ಲಿ ತಾಲೂಕಿನ ೩೨,೨೩೧ ಹೆ. ಜಮೀನಿನಲ್ಲಿ ಬತ್ತವನ್ನು ಬೆಳೆಯಲಾಗಿದ್ದರೆ, ೨೦೦೪–೦೫ರ ಸಾಲಿನಲ್ಲಿ ಇದು ೨೧,೮೦೦ ಹೆ.ಗಳಿಗೆ ಇಳಿದಿತ್ತು. ಫಿಲಿಫೈನ್ಸ್‌ನ ಹೈಬ್ರಿಡ್ ತಳಿಗಳನ್ನು ಸ್ಥಳೀಯ ತಳಿಗಳೊಡನೆ ಸಂಕರಣ ಮಾಡಿ ಅಭಿವೃದ್ಧಿ ಪಡಿಸಿದ ಕರ್ನಾಟಕ ಹೈಬ್ರಿಡ್ ಬತ್ತ–೧ ೧೯೯೪ರಲ್ಲೂ ಕೆ.ಆರ್.ಹೆಚ್–೨ ತಳಿಯನ್ನು ೧೯೯೬ರಲ್ಲೂ ಬಿಡುಗಡೆ ಮಾಡಲಾಗಿದ್ದು, ಅಧಿಕ ಇಳುವರಿಗೆ ಹೆಸರಾಗಿದೆ. ೨೦೦೭–೦೮ರ ಸಾಲಿನಲ್ಲಿ ಒಟ್ಟು ೩೦,೪೮೯ ಹೆ. ಭೂಮಿಯಲ್ಲಿ ಬತ್ತ ಬೆಳೆಯಲಾಗಿತ್ತು.

**ರಾಗಿ :** ತಾಲೂಕಿನ ಶಾಸನಗಳಲ್ಲಿ ರಾಗಿಯ ಉಲ್ಲೇಖ ಕಂಡುಬರದಿದ್ದರೂ, ರಾಗಿಯನ್ನು ಒಂದು ಪ್ರಮುಖ ಒಣ ಕೃಷಿ ಬೆಳೆಯಾಗಿ ಬಹು ಹಿಂದಿನಿಂದಲೂ ತಾಲೂಕಿನಲ್ಲಿ ಬೆಳೆಯಲಾಗುತ್ತಿದ್ದು, ಇದು ಗ್ರಾಮೀಣರ ಮೂಲ ಆಹಾರ ಬೆಳೆಯಾಗಿದೆ. ಸ್ವಾತಂತ್ರ್ಯ ನಂತರದಲ್ಲಿ ಭಾರತ ಮತ್ತು ಆಫ್ರಿಕಾ ದೇಶದ ರಾಗಿ ತಳಿಗಳ ಸಂಕರಣದಿಂದ ಒಡಮೂಡಿದ ಸುಧಾರಿತ ತಳಿಗಳಿಗೆ ಇಂಡಾಫ್ ಎಂದು ಹೆಸರಿಡಲಾಯಿತು. ಅದರಂತೆ ಶಕ್ತಿ ಇಂಡಾಫ್–೧, ಇಂಡಾಫ್–೨, ಇಂಡಾಫ್–೩ ಇಂಡಾಫ್–೫ ಇಂಡಾಫ್–೮ ಮತ್ತು ಇಂಡಾಫ್–೯ ಇಎಸ್–೧೧, ಪೂರ್ಣ ಹಾಗೂ ಪಿ.ಆರ್೨೦೨ ಪ್ರಮುಖ ಸುಧಾರಿತ ರಾಗಿ ತಳಿಗಳಾಗಿದ್ದು, ತಾಲೂಕಿನಲ್ಲೂ ಬಳಕೆಯಾಗುತ್ತಿವೆ. ಈ ತಳಿಗಳ ಅಭಿವೃದ್ಧಿಯಿಂದಾಗಿ ರಾಗಿ ಇಳುವರಿಯಲ್ಲಿ ಖುಷ್ಕಿ ಬೆಳೆಯಾದಲ್ಲಿ ಹೆಕ್ಟೇರಿಗೆ ೨೫–೩೦ ಕ್ವಿಂಟಾಲ್, ನೀರಾವರಿ ಬೆಳೆಯಾದಲ್ಲಿ ಹೆಕ್ಟೇರಿಗೆ ೪೫–೫೦ ಕ್ವಿಂಟಾಲ್‌ನಷ್ಟು ಅಧಿಕ ಇಳುವರಿ ಪಡೆಯಲು ಸಾಧ್ಯವಾಗಿದೆ. ೧೯೮೫–೮೬ನೇ ಸಾಲಿನಲ್ಲಿ ತಾಲೂಕಿನ ೪,೫೧೭ ಹೆ. ಜಮೀನಿನಲ್ಲಿ ಸುಧಾರಿತ ರಾಗಿ ತಳಿಯನ್ನು ಬಳಸಿ, ರಾಗಿಯನ್ನು ಬೆಳೆಯಲಾಗಿತ್ತು. ಅದೇ ೧೯೯೬–೯೭ರ ಸಾಲಿನಲ್ಲಿ ತಾಲೂಕಿನ ೨,೯೯೮ ಹೆ. ಭೂಮಿಯನ್ನು ರಾಗಿ ಬೇಸಾಯಕ್ಕೆ ಬಳಸಿಕೊಂಡಿದ್ದರೆ, ೨೦೦೩–೦೪ರ ಸಾಲಿನಲ್ಲಿ ೬,೧೪೫ ಹೆ. ಜಮೀನು ರಾಗಿ ಕೃಷಿಗೆ ಉಪಯೋಗಿಸಲಾಗಿತ್ತು. ರಾಗಿ ಇಂದಿಗೂ ಗ್ರಾಮೀಣರ ಪ್ರಮುಖ ಆಹಾರ ಬೆಳೆಯಾಗಿದ್ದು, ರೊಟ್ಟಿ, ಮುದ್ದೆ, ಬಳಕೆ ಜನಪ್ರಿಯವಾಗಿದೆ. ಅಲ್ಲದೇ ರಾಗಿಯಿಂದ ರಾಗಿ ಮಾಲ್ಟ್ ಹಾಗೂ ಮಕ್ಕಳ ಪೌಷ್ಠಿಕ ಆಹಾರಗಳ ತಯಾರಿಕೆಗೆ ಬಳಸಲಾಗುತ್ತದೆ. ೨೦೦೭–೦೮ರ ಸಾಲಿನಲ್ಲಿ ಕೇವಲ ೨,೭೧೭ ಹೆ. ಭೂಮಿಯನ್ನು ರಾಗಿ ಬೆಳೆಗೆ ಉಪಯೋಗಿಸಲಾಗಿತ್ತು.

**ಕಬ್ಬು :** ಪ್ರಮುಖ ನೀರಾವರಿ ಬೆಳೆಯಾಗಿರುವ ಇದು ವಾಣಿಜ್ಯ ಬೆಳೆಯೂ ಹೌದು. ಪ್ರಾಚೀನ ಶಾಸನಗಳಲ್ಲಿ ಆಲೆಮನೆಯ ಉಲ್ಲೇಖವಿದೆ. ಇದರಿಂದ ಹಿಂದೆ ಕಬ್ಬನ್ನು ಬೆಳೆಯುತ್ತಿದ್ದ ಅಂಶ ವೇದ್ಯವಾಗುತ್ತದೆ. ರಸತಾಳಿ ಹಾಗೂ ಪಟಾಪಟೆ ಎಂಬ ಎರಡು ಕಬ್ಬಿನ ತಳಿಗಳನ್ನು ಚಿರಪರಿಚಿತವಿದ್ದು, ಸಿ.ಓ–೬೨೧೭೫, ಬಿ–೩೭,೧೭೨, ಸಿಓ–೪೧೯ ಎಂಬ ತಳಿಗಳೂ ಬಳಕೆಯಲ್ಲಿವೆ. ೧೯೯೧–೯೨ರ ಸಾಲಿನಲ್ಲಿ ತಾಲೂಕಿನ ೮೮೮ ಹೆಕ್ಟೇರು ಜಮೀನಿನಲ್ಲಿ ಕಬ್ಬನ್ನು ಬೆಳೆಯಾಗುತ್ತಿದ್ದು, ಅದೇ ೧೯೯೭–೯೮ರ ಸಾಲಿನಲ್ಲಿ ತಾಲೂಕಿನ ೩,೩೩೫ ಹೆಕ್ಟೇರು ಜಮೀನಿನಲ್ಲಿ ಕಬ್ಬನ್ನು ಬೆಳೆಯಲಾಗಿದ್ದರೆ, ೨೦೦೦–೦೧ರಲ್ಲಿ ೩,೬೧೭ ಹೆ.ಗಳಲ್ಲಿ ಹಾಗೂ, ೨೦೦೭–೦೮ರಲ್ಲಿ ೨೦೨೭ ಹೆ. ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗಿತ್ತು.



**ಜೋಳ:** ಇದು ಕೂಡ ತಾಲೂಕಿನಲ್ಲಿ ಬಹು ಹಿಂದಿನಿಂದಲೂ ಬೆಳೆಯುತ್ತಿದ್ದ ಪ್ರಮುಖ ಬೆಳೆಗಳಲ್ಲಿ ಒಂದಾಗಿದ್ದು, ಶಾಸನಗಳಲ್ಲಿ ಕ್ವಚಿತ್ತಾಗಿ ಇದರ ಉಲ್ಲೇಖ ಕಂಡು ಬರುತ್ತದೆ. ಇದನ್ನು ದನಗಳ ಮೇವಿಗೆಂದೇ ಮುಂಗಾರು ಬೆಳೆಯಾಗಿ ಬೆಳೆಯಲಾಗುತ್ತಿದ್ದು, ಸಿ.ಎಸ್.ಎಚ್.೧ ಮತ್ತು ೬ ಸಿ.ಎಸ್.ವಿ–೫ ಹಾಗೂ ಎಂ.೩೫–೧ ಜೋಳದ ಪ್ರಮುಖ ಸುಧಾರಿತ ತಳಿಗಳಾಗಿದ್ದು, ಪ್ರತಿ ಹೆಕ್ಟೇರಿಗೆ ಐವತ್ತು ಕ್ವಿಂಟಾಲ್ ಜೋಳ ಹಾಗೂ ೧೦ ರಿಂದ ೧೫ ಟನ್ ಮೇವನ್ನು ಎಂ.೩೫–೧ ತಳಿಯಿಂದ ನಿರೀಕ್ಷಿಸಬಹುದಾಗಿತ್ತು. ೧೯೮೪–೮೫ರ ಸಾಲಿನಲ್ಲಿ ತಾಲೂಕಿನ ೪,೫೧೭ ಹೆ. ಜಮೀನಿನಲ್ಲಿ ಜೋಳ ಸಾಗುವಳಿ ಮಾಡಿ ಅಧಿಕ ಉತ್ಪನ್ನವನ್ನು ಪಡೆಯಲಾಗಿತ್ತು. ಅದೇ ೧೯೯೧–೯೨ರ ಸಾಲಿನಲ್ಲಿ ಕೇವಲ ೮೭ ಹೆ. ಜಮೀನಿನಲ್ಲೂ ೨೦೦೦–೦೧ರ ಸಾಲಿನಲ್ಲಿ ೩೭೬ ಹೆ. ಭೂಮಿಯಲ್ಲೂ ೨೦೦೪–೦೫ರ ಸಾಲಿನಲ್ಲಿ ಕೇವಲ ೧೪೭ ಹೆ. ಜಮೀನಿನಲ್ಲೂ ಜೋಳವನ್ನು ಬೆಳೆಯಲಾಗಿದ್ದು, ೨೦೦೭–೦೮ರಲ್ಲಿ ಇದು ಕೇವಲ ೭೦ ಹೆ. ಇಳಿದಿತ್ತು.

**ಮುಸುಕಿನ ಜೋಳ :** ಈ ಬೆಳೆಯನ್ನು ತಾಲೂಕಿನಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ೧೯೯೬–೯೭ನೇ ಸಾಲಿನಲ್ಲಿ ಎಂಟು ಹೆ. ಪ್ರದೇಶದಲ್ಲಿ ಮಾತ್ರ ಇದನ್ನು ಬೆಳೆದಿದ್ದರೆ ೨೦೦೪–೦೫ರ ಸಾಲಿನಲ್ಲಿ ೧,೭೪೦ ಹೆ. ಪ್ರದೇಶದಲ್ಲಿ ಇದನ್ನು ಬೆಳೆಯಲಾಗಿದ್ದು, ೨೦೦೭–೦೮ರಲ್ಲಿ ೮೭೯ ಹೆ. ಪ್ರದೇಶವನ್ನು ಬಳಸಲಾಗಿತ್ತು.

**ಎಣ್ಣೆಕಾಳುಗಳು :** ಬಹುಹಿಂದಿನಿಂದಲೂ ಎಣ್ಣೆಕಾಳನ್ನು ಬೆಳೆಯುತ್ತಿದ್ದುದಕ್ಕೆ ಶಾಸನಾಧಾರಗಳಿದ್ದು, ದೇವಾಲಯಗಳಿಗೆ, ಗಾಣ ಹಾಗೂ ಗಾಣದೆರೆಗಳನ್ನು ದತ್ತಿ ಬಿಟ್ಟ ಉಲ್ಲೇಖಗಳು ಇದನ್ನು ಖಚಿತಪಡಿಸುತ್ತವೆ. ಹರಳು, ಹುಚ್ಚೆಳ್ಳು, ಎಳ್ಳು, ನೆಲಗಡಲೆ, ಸೂರ್ಯಕಾಂತಿ, ಮುಂತಾದವು ತಾಲೂಕಿನ ಪ್ರಮುಖ ಎಣ್ಣೆಬೀಜದ ಬೆಳೆಗಳಾಗಿವೆ. ಇವುಗಳಲ್ಲಿ ನೆಲಗಡಲೆಯನ್ನು ಪೋರ್ಚುಗೀಸರು ನಮ್ಮಲ್ಲಿಗೆ ತಂದಿದ್ದೆಂಬ ಅಭಿಪ್ರಾಯ ವಿಂದು ಸ್ವೀಕೃತವಾಗಿದೆ. ಎಣ್ಣೆಕಾಳು ಕೃಷಿಯ ಅಭಿವೃದ್ಧಿಗೆ ಪೂರಕವಾಗಿ ವಿಶೇಷ ಪ್ರಚಾರ ಕಾರ್ಯಕ್ರಮವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈಗಾಗಲೇ ಕೈಗೊಂಡಿವೆ. ನೆಲಗಡಲೆಯನ್ನು ಖುಷ್ಕಿ ಹಾಗೂ ತರಿ ಬೆಳೆಯಾಗಿಯೂ ಬೆಳೆಯಲಾಗುತ್ತಿದ್ದು, ೧೯೮೪ರ ಸಾಲಿನಲ್ಲಿ ತಾಲೂಕಿನ ೪,೭೯೮ ಹೆ. ಜಮೀನಿನಲ್ಲಿ ನೆಲಗಡಲೆಯನ್ನು ಬೆಳೆಯಲಾಗಿದ್ದು, ಜಿಲ್ಲೆಯಲ್ಲಿ ಈ ತಾಲೂಕಿಗೆ ನಾಲ್ಕನೆಯ ಸ್ಥಾನ ಲಭಿಸಿತ್ತು. ಅದೇ ೧೯೯೨ರಲ್ಲಿ ತಾಲೂಕಿನ ೨,೪೪೮ ಹೆ. ಭೂಮಿಯಲ್ಲಿ ಬೆಳೆದರೆ, ೨೦೦೭–೦೮ರ ಸಾಲಿನಲ್ಲಿ ಇದು ಕೇವಲ ೧,೦೮೪ ಹೆ. ಪ್ರದೇಶಕ್ಕೆ ಸೀಮಿತವಾಗಿತ್ತು. ಅಲ್ಲದೇ ಅದೇ ಸಾಲಿನಲ್ಲಿ ೨೭೫ ಹೆ. ಜಮೀನಿನಲ್ಲಿ ಸೂರ್ಯಕಾಂತಿ ಹಾಗೂ ೬೨೬ ಹೆ. ಭೂಮಿಯಲ್ಲಿ ಇತರೇ ಎಣ್ಣೆಕಾಳುಗಳನ್ನು ಬೆಳೆಯಲಾಗಿತ್ತು.

**ದ್ವಿದಳ ಧಾನ್ಯಗಳು :** ತೊಗರಿ, ಹೆಸರು, ಅವರೆ, ಹುರುಳಿ, ಉದ್ದು, ಕಡಲೆ ತಾಲೂಕಿನ ಪ್ರಮುಖ ದ್ವಿದಳಧಾನ್ಯಗಳಾಗಿವೆ. ತಾಲೂಕಿನಲ್ಲಿ ೧೯೯೬–೯೭ ರ ಸಾಲಿನಲ್ಲಿ ೪,೨೨೦ ಹೆ. ಭೂಮಿಯಲ್ಲಿ ವಿವಿಧ ದ್ವಿದಳಧಾನ್ಯಗಳನ್ನು ಬೆಳೆಯಲಾಗಿತ್ತು. ಅದೇ ೨೦೦೦–೦೧ರ ಸಾಲಿನಲ್ಲಿ ಇದು ೬,೩೯೪ ಹೆ. ಗಳಿಗೂ ೨೦೦೭–೦೮ರ ಸಾಲಿನಲ್ಲಿ ೮,೧೬೫ ಹೆ.ಗಳಿಗೂ ಏರಿದ್ದು, ದ್ವಿದಳಧಾನ್ಯಗಳ ಬೇಸಾಯ ಪ್ರಮಾಣವು ತಾಲೂಕಿನಲ್ಲಿ ಅಧಿಕಗೊಂಡಿರುವುದು ಇದರಿಂದ ವೇದ್ಯವಾಗುತ್ತದೆ.

**ಹಿಪ್ಪುನೇರಳೆ :** ರೇಷ್ಮೆ ಕೃಷಿಗೆ ಪೂರಕವಾಗಿ ಹಿಪ್ಪುನೇರಳೆ ಸೊಪ್ಪನ್ನು ಬೆಳೆಯಲಾಗುತ್ತದೆ. ತಾಲೂಕಿನಲ್ಲಿ ರೇಷ್ಮೆಕೃಷಿಯು ರೈತರ ಪ್ರಮುಖ ಉಪಕಸುಬಾಗಿದೆ. ೧೯೯೧–೯೨ರ ಸಾಲಿನಲ್ಲಿ ತಾಲೂಕಿನಲ್ಲಿ ಒಟ್ಟು ೬,೭೫೯ (೨,೭೭೬ ಹೆ. ಮಳೆಯಾಶ್ರಿತ ಹಾಗೂ ೩,೯೮೩ ಹೆ. ನೀರಾವರಿ ಆಶ್ರಿತ) ಹೆ. ಭೂಮಿಯಲ್ಲಿ ಹಿಪ್ಪುನೇರಳೆ ಸೊಪ್ಪಿನ ಕೃಷಿಯನ್ನು ಮಾಡಲಾಗಿತ್ತು. ಅದೇ ೧೯೯೭–೯೮ರ ಸಾಲಿನಲ್ಲಿ ೩,೯೪೭ ಹೆ. ಭೂಮಿಯನ್ನು ೨೦೦೧–೦೨ರ ಸಾಲಿನಲ್ಲಿ ೨,೫೭೩ ಹೆ. ಜಮೀನನ್ನೂ ೨೦೦೭–೦೮ರ ಸಾಲಿನಲ್ಲಿ ೫೩೯ ಹೆ. ಭೂಮಿಯನ್ನು ಹಿಪ್ಪುನೇರಳೆ ಬೆಳೆಗೆ ಬಳಸಿಕೊಳ್ಳಲಾಗಿತ್ತು.

**ಒಣಬೇಸಾಯ :** ತಾಲೂಕಿನಲ್ಲಿ ಬಹುಹಿಂದಿನಿಂದ ನೀರಾವರಿ ಸೌಲಭ್ಯವಿದ್ದರೂ, ಹೆಚ್ಚಿನ ಭಾಗ ಒಣಬೇಸಾಯವನ್ನೇ ಅವಲಂಬಿಸಿದ್ದು, ಅದೇ ಪರಿಸ್ಥಿತಿ ಇಂದಿಗೂ ಇದೆ. ತಾಲೂಕಿನಲ್ಲಾಗುವ ಮಳೆಯೂ ಕಡಿಮೆ ಇದ್ದು, ಅದರ ವಿತರಣೆಯೂ ಸಮನಾಗಿಲ್ಲ. ಆ ಕಾರಣದಿಂದ ತಾಲೂಕಿನ ಕೆಲಭಾಗವು ಅನಾವೃಷ್ಟಿಯಿಂದಾಗಿ ಬರಕ್ಕೆ ತುತ್ತಾದರೆ, ಅತಿವೃಷ್ಟಿಯಿಂದಾಗಿ ನದಿಯಂಚಿನ ಗ್ರಾಮಗಳು ಪ್ರವಾಹಕ್ಕೆ ಸಿಲುಕಿ ನಷ್ಟಕ್ಕೊಳಗಾಗುವುದುಂಟು. ಒಣಬೇಸಾಯ ಪ್ರದೇಶದಲ್ಲಿ ಮೇಲ್ಮಣ್ಣಿನ ಸಂರಕ್ಷಣೆ, ಹರಿವ ನೀರಿನ ನಿಯಂತ್ರಣ, ಬೆಳೆಯ ಆಯ್ಕೆಯಲ್ಲಿ ಸೂಕ್ತ ಬದಲಾವಣೆ ಮುಂತಾದವನ್ನು ವಾರ್ಷಿಕ ಮಳೆಗಳಲ್ಲಿನ ವ್ಯತ್ಯಾಸವನ್ನಾಧರಿಸಿ ಮಾಡಿಕೊಳ್ಳಬೇಕಾಗುತ್ತದೆ. ಅದರಲ್ಲೂ ಫಲವತ್ತತೆಯನ್ನು ಕಾಯ್ದಿಟ್ಟುಕೊಳ್ಳುವ ದೃಷ್ಟಿಯಿಂದ ಮೇಲ್ಮಣ್ಣಿನ ಸಂರಕ್ಷಣೆ ಅತ್ಯಗತ್ಯವಾಗಿದ್ದು, ಮಣ್ಣು ಸಂರಕ್ಷಣೆಗೆ ಪೂರಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಜಮೀನಿನಲ್ಲಿ ಮಳೆನೀರಿನ ಹರಿವನ್ನು ನಿಯಂತ್ರಿಸುವ ಮೂಲಕ ಮೇಲ್ಮಣ್ಣನ್ನು ಸಂರಕ್ಷಿಸುವ ಸಲುವಾಗಿ ಒಡ್ಡನ್ನು ನಿರ್ಮಿಸುವ ಕ್ರಮಕೈಗೊಳ್ಳಲಾಗಿದೆ. ಅದರಂತೆ ತಾಲೂಕಿನಲ್ಲೂ ಸುಮಾರು ೩೫,೪೧೦ ಹೆ. ಜಮೀನಿನ ಮೇಲ್ಮಣ್ಣಿನ ಸವಕಳಿಯನ್ನು ತಡೆಗಟ್ಟುವ ಕಾರ್ಯಕ್ರಮವನ್ನು ೧೯೭೮ರಲ್ಲಿ ರೂಪಿಸಲಾಗಿದ್ದು, ೧೯೮೫ರ ಮಾರ್ಚ್ ಅಂತ್ಯಕ್ಕೆ ೧೫,೧೩೬ ಹೆ.ಗಳಲ್ಲಿ ಒಡ್ಡನ್ನು ನಿರ್ಮಿಸಲಾಗಿತ್ತು. ಅಲ್ಲದೆ ಕೃಷಿ ನಿರ್ವಹಣೆ ಅಧ್ಯಯನಕ್ಕಾಗಿ ೧೯೭೬–೭೭ರ ಸಾಲಿನಲ್ಲಿ ತಾಲೂಕಿನ ಬೇವಿನಹಳ್ಳಿ ಹಾಗೂ ಗಾಣಿಗನಕೊಪ್ಪಲು ಗ್ರಾಮಗಳನ್ನು ಆಯ್ಕೆ ಮಾಡಿ ಅವನ್ನು ಮಾದರಿಯಾಗಿಟ್ಟುಕೊಂಡು ಪ್ರತಿ ಹೆ. ಜಮೀನಿನಲ್ಲಿ ಕೃಷಿ ಮಾಡಿ ವಿವಿಧ ಬೆಳೆಗಳ ಉತ್ಪನ್ನ ಪಡೆಯಲು ತಗಲುವ ವೆಚ್ಚವನ್ನು ತಿಳಿಯಲು ಯತ್ನಿಸಲಾಗಿತ್ತು. ಈ ಕ್ರಿಯೆ ನಿರಂತರವಾಗಿ ನಡೆದಿದ್ದು, ರಾಜ್ಯ ಜಲಾನಯನ ಇಲಾಖೆಯು



ಪ್ರತ್ಯೇಕ ಅಸ್ತಿತ್ವದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಅದರ ವ್ಯಾಪ್ತಿಗೆ ಈ ಚಟುವಟಿಕೆಗಳು ಒಳಪಡುತ್ತವೆ.

**ಸಮಗ್ರ ಕೃಷಿಬೆಳೆ ವಿಮಾ ಯೋಜನೆ :** ರೈತರ ಬೆಳೆಗಳು ಪ್ರಕೃತಿ ವಿಕೋಪಕ್ಕೆ ತುತ್ತಾಗುವುದರಿಂದ ಪ್ರತಿ ಹಂಗಾಮಿನಲ್ಲೂ ರೈತರು ನಷ್ಟಕ್ಕೆ ಈಡಾಗುವುದು ಸಾಮಾನ್ಯ. ಅವರಿಗೆ ಆದ ನಷ್ಟವನ್ನು ಭರಿಸುವುದರ ಜೊತೆಗೆ ಮುಂದಿನ ಹಂಗಾಮಿನಲ್ಲಿ ಬೆಳೆಸಾಲ ಪಡೆಯಲು ಅರ್ಹತೆಯನ್ನು ಉಳಿಸುವ ಸಲುವಾಗಿ ಕೇಂದ್ರ–ರಾಜ್ಯ ಸರ್ಕಾರಗಳು ಜಂಟಿಯಾಗಿ ವ್ಯಾಪಕ ಬೆಳೆವಿಮಾ ಯೋಜನೆಯನ್ನು ೧೯೮೫ರ ಮುಂಗಾರು ಹಂಗಾಮಿನಿಂದ ರಾಜ್ಯದಾದ್ಯಂತ ಪ್ರಾರಂಭಿಸಿದವು. ಈ ಯೋಜನೆಯಡಿ ಆಯ್ದ ಏಕ/ದ್ವಿದಳ ಧಾನ್ಯಗಳ ಸಾಗುವಳಿಗೆ ಬೆಳೆಸಾಲವನ್ನು ಸಹಕಾರಿ ಬ್ಯಾಂಕು, ವಾಣಿಜ್ಯ ಬ್ಯಾಂಕು ಹಾಗೂ ಸ್ಥಳೀಯ ಗ್ರಾಮೀಣ ಬ್ಯಾಂಕುಗಳಿಂದ ಪಡೆಯುವ ಎಲ್ಲಾ ರೈತರಿಗೂ ಬೆಳೆ ವಿಮಾ ಯೋಜನೆಯನ್ನು ಕಡ್ಡಾಯ ಮಾಡಲಾಗಿದೆ.

ಈ ಯೋಜನೆಯಡಿ, ಪ್ರತಿ ಹಂಗಾಮಿನಲ್ಲೂ ನಿರ್ದಿಷ್ಟ ಕ್ಷೇತ್ರಗಳಲ್ಲಿ ಬೆಳೆ ಕಟಾವು ಸಮೀಕ್ಷೆಯನ್ನು ಆಧರಿಸಿ, ನಷ್ಟದ ಪ್ರಮಾಣವನ್ನು ತಾಲೂಕು ಮಟ್ಟದಲ್ಲಿ ನಿರ್ಧರಿಸಿ ನಷ್ಟ ಪರಿಹಾರದ ಮೊತ್ತವನ್ನು ಮುಂಬೈನ ಭಾರತೀಯ ಸಾಮಾನ್ಯ ವಿಮಾ ನಿಗಮ ಹಾಗೂ ರಾಜ್ಯ ಸರ್ಕಾರಗಳು ೨:೧ರ ಅನುಪಾತದಲ್ಲಿ ಭರಿಸುತ್ತಿವೆ. ಮುಂದೆ ನಷ್ಟ ಪ್ರಮಾಣವನ್ನು ಹೋಬಳಿ ಮಟ್ಟದಲ್ಲಿ ನಿರ್ಧರಿಸಿ ಪರಿಹಾರ ನೀಡುವ ವಿಚಾರವಿದೆ. ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ವಿಮಾ ಕಂತಿನ ಮೇಲೆ ನೀಡಬೇಕಾದ ಶೇ.೫೦ರ ಸಹಾಯಧನವನ್ನು ಕೇಂದ್ರ–ರಾಜ್ಯ ಸರ್ಕಾರಗಳು ಸಮಪ್ರಮಾಣದಲ್ಲಿ ನೀಡುತ್ತಿದ್ದು, ಇದರಿಂದ ತಾಲೂಕಿನ ರೈತರಿಗೂ ಅನುಕೂಲವಾಗುತ್ತಿದೆ.

**ಕೃಷಿ ಪ್ರಶಸ್ತಿ :** ರೈತರ ಸತತ ಪರಿಶ್ರಮ ಹಾಗೂ ಕ್ರಿಯಾಶೀಲತೆಗಳಿಂದಾಗಿ ಕೃಷಿ ಉತ್ಪಾದನೆಯಲ್ಲಿ ಗಣನೀಯ ಅಭಿವೃದ್ಧಿಯಾಗಿದ್ದು, ಅಂತಹ ಸೃಜನಶೀಲ ರೈತರನ್ನು ಗುರುತಿಸಿ ತಾಲೂಕು ಮಟ್ಟದಲ್ಲೂ ಕೃಷಿ ಪ್ರಶಸ್ತಿ ಬಹುಮಾನವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಆಯ್ಕೆ ಮಾಡಲಾದ ಬೆಳೆಗಳಿಗೆ ತಾಲೂಕು ಮಟ್ಟದಲ್ಲೂ ತಲಾ ಮೂರು ಬಹುಮಾನಗಳನ್ನು ನೀಡಲಾಗುತ್ತಿದ್ದು, ಪ್ರಥಮ ಬಹುಮಾನ ೨೫,೦೦೦ ರೂ. ದ್ವಿತೀಯ ಬಹುಮಾನ ೧೦,೦೦೦ ಹಾಗೂ ತೃತೀಯ ಬಹುಮಾನ ೫,೦೦೦ ರೂ.ಗಳಾಗಿದೆ.

## ನೀರಾವರಿ

ಮಳೆ ಆಧಾರಿತ ಒಣಬೇಸಾಯ ಪದ್ಧತಿಯು ಬಹುಹಿಂದಿನಿಂದಲೂ ತಾಲೂಕಿನಾದ್ಯಂತ ಪ್ರಧಾನವಾಗಿ ಚಾಲ್ತಿಯಲ್ಲಿದ್ದರೂ ನದಿ, ಕೆರೆ, ಬಾವಿಗಳನ್ನು ಬಳಸಿ ನೀರಾವರಿ ಸೌಕರ್ಯ ರೂಪಿಸಿಕೊಂಡು ಸುಧಾರಿತ ಕೃಷಿಪದ್ಧತಿಯನ್ನು ರೈತರು ಅನುಸರಿಸುತ್ತಿದ್ದ ಅಂಶವನ್ನು ಗಂಗರ ಕಾಲದಷ್ಟು ಹಿಂದಕ್ಕೆ ಶಾಸನಾಧಾರಗಳಿಂದ

ಗುರುತಿಸಬಹುದಾಗಿದೆ. ತಾಲೂಕಿನ ಆಲ್ಗೋಡು, ತಲಕಾಡು, ಹುಣಸೂರು, ಬನ್ನೂರು, ಭೈರಾಪುರ, ಮಾದಾಪುರ, ನೀಲಸೋಗೆ, ಕಲಿಯೂರು, ಮುಂತಾದೆಡೆ ಗಂಗರ ಕಾಲದಷ್ಟು ಪ್ರಾಚೀನ ಕೆರೆಗಳಿದ್ದರೆ, ಮೂಗೂರು, ತಡಿಮಾಲಂಗಿ, ಸೋಮನಾಥಪುರ ಮುಂತಾದೆಡೆ ಹೊಯ್ಸಳರ ಕಾಲದ ಕೆರೆಗಳನ್ನು ನೋಡಬಹುದಾಗಿದೆ. ವಿಜಯನಗರ ಕಾಲಕ್ಕೆ ಸೇರಿದ ಮಾಧವಮಂತ್ರಿ ಅಣೆಕಟ್ಟನ್ನು ಹೆಮ್ಮಿಗೆ ಬಳಿ ಕಾವೇರಿ ನದಿಗೆ ೧೩೪೧ರಲ್ಲಿ ನಿರ್ಮಿಸಿದ್ದು, ಅದರ ಕಾಲುವೆಯ ಪ್ರಸ್ತಾಪ, ತಲಕಾಡಿನ ೧೬೩೩ರ ಶಾಸನವೊಂದರಲ್ಲಿದ್ದು, ಅದು ಇಂದಿಗೂ ಕಾರ್ಯನಿರ್ವಹಿಸುತ್ತಿದೆ. ಮೈಸೂರು ಅರಸರ ಕಾಲದಲ್ಲಿ ಕೆರೆಗಳ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಲಾಯಿತು. ಕೆರೆಗಳ ನಿರ್ವಹಣೆ, ದುರಸ್ತಿ, ಸುಧಾರಣೆಗಳಿಗೆ ಸಂಬಂಧಿಸಿದಂತೆ ಪೂರಕ ವ್ಯವಸ್ಥೆಯನ್ನು ಕೆರೆಯ ನಿರ್ಮಾಣ ಸಂದರ್ಭದಲ್ಲೇ ಯೋಚಿಸಿ, ಉಂಬಳಿ ನೀಡಲಾಗುತ್ತಿದ್ದು, ಶಾಸನಗಳಲ್ಲಿ ಬಿತ್ತುವಟ್ಟ, ಕಟ್ಟುಕೊಡುಗೆ ಮುಂತಾದ ದತ್ತಿಗಳ ಉಲ್ಲೇಖ ಕಂಡುಬರುತ್ತಿದ್ದು, ಕೆರೆಯ ಹೂಳನ್ನು ಎತ್ತುವುದು, ಕಾಲುವೆ–ತೂಬುಗಳನ್ನು ದುರಸ್ತಿ ಮಾಡುವುದು ಕೆರೆ ಅಚ್ಚುಕಟ್ಟು ಪ್ರದೇಶವನ್ನು ವಿಸ್ತರಿಸುವುದು, ಕೆರೆಯ ಒಡ್ಡು ಏರಿಗಳನ್ನು ಬಲಪಡಿಸುವುದೇ ಮುಂತಾದ ಕಾರ್ಯಗಳಿಗಾಗಿಯೇ ಪ್ರತಿ ಗ್ರಾಮದಲ್ಲೂ ಸಾಕಷ್ಟು ಜಮೀನನ್ನು ದತ್ತಿ ಬಿಡಲಾಗುತ್ತಿತ್ತು. ತಾಲೂಕಿನ ಆಲ್ಗೋಡು ಗ್ರಾಮದಲ್ಲಿ ಕೆರೆ ನಿರ್ಮಿಸಿ ತೂಬನ್ನು ಇಕ್ಕಿಸಿದ ಅಂಶ, ಆಲ್ಗೋಡಿನ ೧೦ನೆಯ ಶತಮಾನದ ಗಂಗ ಶಾಸನವೊಂದರಲ್ಲಿ ಉಕ್ತವಾಗಿದೆ. ಇದೇ ರೀತಿ ಬನ್ನೂರಿನ ಶಾಸನವೊಂದರಲ್ಲಿ ಅಲ್ಲಿಯ ಕೆರೆಯ ಪ್ರಸ್ತಾಪವಿದೆ. ಗಂಗರಸ ಸತ್ಯವಾಕ್ಯ ಪೆರ್ಮನಡಿಯ ಕಾಲಕ್ಕೆ ಸೇರಿದ ಬಸವನಹಳ್ಳಿಯ ಶಾಸನದಲ್ಲಿ ಎರೆಯಲಿಂಗೇಶ್ವರ ದೇವಾಲಯಕ್ಕೆ ಬಿಟ್ಟ ದತ್ತಿಯ ಜೊತೆಗೆ ಕೆರೆಯ ನಿರ್ವಹಣೆಗೆಂದು ಬಿತ್ತುವಟ್ಟವನ್ನು ನೀಡಿದ್ದ ಅಂಶ ಗಮನಾರ್ಹವಾಗಿದೆ. ತಡಿಮಾಲಂಗಿಯ ೧೨೯೦ರ ಶಾಸನದಲ್ಲಿ ಏತ ನೀರಾವರಿಗೆ ಸಂಬಂಧಿಸಿದ ಅರಗಟ್ಟ(ಪರ್ಷಿಯನ್ ಗಾಲಿ)ದ ಉಲ್ಲೇಖವಿದೆ. ಸೋಮನಾಥಪುರದ ಹೊಯ್ಸಳ ಶಾಸನಗಳಲ್ಲಿ ಕಾವೇರಿ ನದಿಯ ನೀರನ್ನು ನೀರಾವರಿಗೆಂದು ಕಾಲುವೆಗಳ ಮೂಲಕ ಬಳಸಿಕೊಳ್ಳುತ್ತಿದ್ದುದ್ದಕ್ಕೆ ಉಲ್ಲೇಖವಿದೆ. ಅಲ್ಲದೆ ಅವುಗಳ ನಿರ್ವಹಣೆಗೆಂದು ಪರ್ಯಾಯ ವ್ಯವಸ್ಥೆ ಮಾಡಿದ್ದಕ್ಕೂ ವಿವರವಿದೆ. ಮೈಸೂರು ಅರಸರ ಕಾಲಕ್ಕೆ ಸೇರಿದ ನರಸೀಪುರ ತಾಮ್ರ ಶಾಸನದಲ್ಲಿ ನೀರಾವರಿಗೆ ಸಂಬಂಧಿಸಿದ ಮಹತ್ವದ ಅಂಶಗಳಿವೆ.

**ಅಣೆಕಟ್ಟುಗಳು :** ತಾಲೂಕಿನಲ್ಲಿ ಹರಿಯುವ ಕಾವೇರಿ ನದಿಗೆ ಸುಮಾರು ೧೩೪೧ರಲ್ಲಿ ನಿರ್ಮಿಸಲಾಗಿರುವ ಮಾಧವಮಂತ್ರಿ ಅಣೆಕಟ್ಟೆಯ ಎರಡು ಕಾಲುವೆಗಳು ತಾಲೂಕಿನ ೧೮೭೪ ಹೆಕ್ಟೇರ್ ಜಮೀನಿಗೆ ನೀರುಣಿಸುವುದರ ಜೊತೆಗೆ ತಲಕಾಡು ಪಟ್ಟಣಕ್ಕೂ ನೀರು ಒದಗಿಸುತ್ತಿದ್ದವು. ಕಾವೇರಿ ನದಿಗೆ ಶ್ರೀರಂಗಪಟ್ಟಣ ತಾಲೂಕಿನ ಗೆಂಡೆಹೊಸಹಳ್ಳಿ ಬಳಿ ನಿರ್ಮಿಸಿರುವ ರಾಮಸ್ವಾಮಿ ಅಣೆಕಟ್ಟೆಯ ಎರಡು ಕಾಲುವೆಗಳಿಂದ ತಾಲೂಕಿನ ಬನ್ನೂರು, ಸೋಸಲೆ ಹೋಬಳಿಗಳಿಗೆ ನೀರಾವರಿ ಸೌಕರ್ಯ ಲಭಿಸಿದೆ. ಈ ಅಣೆಕಟ್ಟೆಯ ಎಡದಂಡೆ (ರಾಮಸ್ವಾಮಿ) ನಾಲೆಯು ತಾಲೂಕಿನ ಬನ್ನೂರು–ಸೋಸಲೆ ಹೋಬಳಿಯ ಆಯ್ದ ಗ್ರಾಮಗಳಿಗೆ ನೀರಾವರಿಯನ್ನು ಒದಗಿಸಿದ್ದರೆ ಬಲದಂಡೆ (ರಾಜಪರಮೇಶ್ವರಿ)



ನಾಲೆಯು ತಾಲೂಕಿನ ಪಶ್ಚಿಮ ಭಾಗದ ಗ್ರಾಮಗಳಿಗೆ ನೀರೊದಗಿಸುತ್ತದೆ. ಕೃಷ್ಣರಾಜಸಾಗರ ಬಲದಂಡೆ (ವರುಣ/ಡಿ.ದೇವರಾಜ ಅರಸ್) ನಾಲೆಯ ಮೊದಲ ಹಂತದ ಕಾರ್ಯ ಪೂರ್ಣಗೊಂಡಾಗ ತಾಲೂಕಿನ ೩,೦೮೫ ಹೆ.ಜಮೀನಿಗೆ ನೀರಾವರಿ ಸೌಕರ್ಯ ಲಭಿಸುವುದೆಂದು ನಿರೀಕ್ಷಿಸಲಾಗಿತ್ತು.

ಕಬಿನಿ ನದಿಗೆ ಬೀಚನಹಳ್ಳಿ (ಹೆಚ್.ಡಿ.ಕೋಟೆ ತಾಲೂಕು) ಬಳಿ ನಿರ್ಮಿಸಿರುವ ಅಣೆಕಟ್ಟೆ (೧೯೭೪)ಯ ಬಲದಂಡೆ (ತಗಡೂರು ರಾಮಚಂದ್ರರಾವ್) ನಾಲೆಯ ಕಾರ್ಯ ೧೯೮೬ರ ವೇಳೆಗೆ ಪೂರ್ಣಗೊಂಡುದರ ಪರಿಣಾಮವಾಗಿ ತಾಲೂಕಿನ ನರಸೀಪುರ ಹಾಗೂ ಮೂಗೂರು ಹೋಬಳಿಯ ೧೩,೧೮೨ ಹೆಕ್ಟೇರು ಜಮೀನಿಗೆ ನೀರಾವರಿ ಸೌಕರ್ಯ ಲಭಿಸಿದೆ. ಅಲ್ಲದೆ ತಾಲೂಕಿನ ನಿಲಸೋಗೆ ಗ್ರಾಮದ ೧೨೭ ಹೆ., ಚಂದಹಳ್ಳಿ ಗ್ರಾಮದ ೧೬೧ ಹೆ., ಚನ್ನಬಸವನಹುಂಡಿ ಗ್ರಾಮದ ೧೨೧ ಹೆ., ಮಾವಿನಹಳ್ಳಿ ಗ್ರಾಮದ ೧೨೧ ಹೆ., ಹಾಗೂ ಮಾಲಂಗಿ ಗ್ರಾಮದ ೨೫೧ ಹೆ. ಭೂಮಿಗಳಿಗೆ ಈ ನಾಲೆಯಿಂದ ಏತ ನೀರಾವರಿ ಮೂಲಕ ನೀರುಣಿಸಲಾಗುತ್ತಿದೆ. ತಾಲೂಕಿನಲ್ಲಿಯ ಈ ಎಲ್ಲಾ ಕಾಲುವೆಗಳ ಒಟ್ಟು ಉದ್ದ ೨೦೪ ಕಿ.ಮೀ.ಗಳಾಗಿದೆ.

ತಾಲೂಕಿನಲ್ಲಿ ೧೯೪೬ರ ವೇಳೆಗೆ ಒಂಭತ್ತು ದೊಡ್ಡಕೆರೆ ಹಾಗೂ ೨೮ ಸಣ್ಣ ಕೆರೆಗಳಿದ್ದು, ಅವುಗಳಿಂದ ೪,೬೨೦ ಎಕರೆ ಜಮೀನಿಗೆ ನೀರಾವರಿ ಸೌಕರ್ಯ ಲಭಿಸುತ್ತಿತ್ತು. ಅಲ್ಲದೇ ತಾಲೂಕಿನ ೧೩,೮೭೯ ಎಕರೆ ಜಮೀನಿಗೆ ವಿವಿಧ ಕಾಲುವೆಗಳಿಂದಲೂ, ೧೮೪ ಎಕರೆ ಜಮೀನಿಗೆ ಬಾವಿ ಹಾಗೂ ಇನ್ನಿತರ ಮೂಲಗಳಿಂದಲೂ ನೀರಾವರಿ ಸೌಲಭ್ಯ ದೊರೆಯುತ್ತಿತ್ತು. ಅದೇ ೧೯೮೪–೮೫ರ ಸಾಲಿನಲ್ಲಿ ತಾಲೂಕಿನಲ್ಲಿ ಬಿತ್ತನೆಯಾದ ಒಟ್ಟು ೧೮,೭೨೧ ಹೆ. ನೀರಾವರಿ ನಿವ್ವಳ ಪ್ರದೇಶದಲ್ಲಿ ೧೪,೧೯೬ ಹೆ.ಗಳಿಗೆ ಕಾಲುವೆಗಳ ಮೂಲಕ ೨,೭೮೫ ಹೆ. ಗಳಿಗೆ ಕೆರೆಗಳ ಮೂಲಕ ೧,೩೧೦ ಹೆ.ಗಳಿಗೆ ಬಾವಿಗಳ ಮೂಲಕ ಹಾಗೂ ೪೩೦ ಹೆ.ಗಳಿಗೆ ಇತರೇ ಮೂಲಗಳಿಂದ ನೀರಾವರಿ ಸೌಕರ್ಯ ಲಭಿಸಿತ್ತು.

ಪ್ರಕೃತಿಯ ವಿಕೋಪದಿಂದುಂಟಾಗುವ ಹಾನಿಯನ್ನು ಕುಂಠಿತಗೊಳಿಸುವಲ್ಲಿ ಸಣ್ಣ ನೀರಾವರಿ ಯೋಜನೆಗಳು ಮಹತ್ವದ್ದಾಗಿವೆ. ೨೫ ಲಕ್ಷ ರೂ.ಗಳಿಗಿಂತ ಕಡಿಮೆ ವೆಚ್ಚದ ನೀರಾವರಿ ಯೋಜನೆಗಳು ಈ ವರ್ಗಕ್ಕೆ ಬರುತ್ತವೆ. ಅಲ್ಲದೆ ಯೋಜನಾ ಆಯೋಗದ ಸೂಚನೆಯಂತೆ ೨,೦೦೦ ಹೆ.ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶವನ್ನು ಹಳ್ಳಕೊಳ್ಳ ಕೆರೆ, ಕಾಲುವೆ, ಏತ ನೀರಾವರಿ ಯೋಜನೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. ಅದರಂತೆ ೧೯೮೫ರ ಮಾರ್ಚ್ ಅಂತ್ಯಕ್ಕೆ ಸಣ್ಣ ನೀರಾವರಿ ಯೋಜನೆಯಡಿ ತಾಲೂಕಿನಲ್ಲಿ ಲಭ್ಯವಿದ್ದ ಒಟ್ಟು ೧೬,೯೪೪ ಹೆ.ಗಳಲ್ಲಿ ತಾಲೂಕಿನ ೩೫ ಕೆರೆಗಳಿಂದ ೨,೫೮೧ ಹೆ. ಜಮೀನಿಗೂ, ೧೬ ಪಿಕ್‌ಅಪ್‌ಗಳಿಂದ ೧,೬೧೧ ಹೆ. ಜಮೀನಿಗೂ ಏತ ನೀರಾವರಿಯಿಂದ ೧,೧೩೩ ಹೆ.ಗೂ ಹಾಗೂ ಇತರೆ ಹತ್ತು ಸಣ್ಣ ನೀರಾವರಿ ಯೋಜನೆಗಳಿಂದ ೧೧,೬೧೯ ಹೆ.) ಜಮೀನಿಗೆ ನೀರಾವರಿ ಸೌಕರ್ಯವನ್ನು ಕಲ್ಪಿಸಲಾಗಿತ್ತು.

ಅದೇ ೧೯೯೬–೯೭ರ ಸಾಲಿನಲ್ಲಿ ತಾಲೂಕಿನಲ್ಲಿ ನೀರಾವರಿಯಾಗಿದ್ದ ೩೦,೩೮೦ ಹೆ. ನಿವ್ವಳ ಜಮೀನಿನಲ್ಲಿ ೨೮,೮೯೦ ಹೆ. ಗಳಿಗೆ ಕಾಲುವೆಗಳಿಂದ, ೮೧೦ ಹೆ.ಗೆ ಕೆರೆಗಳಿಂದ, ೫೫೯ ಹೆ.ಗಳಿಗೆ ಬಾವಿಗಳಿಂದ ಹಾಗೂ ೧೨೧ ಹೆ.ಗೆ ಕೊಳವೆ ಬಾವಿಗಳಿಂದ ನೀರಾವರಿ ಸೌಕರ್ಯ ಲಭಿಸಿತ್ತು. ೨೦೦೩–೦೪ರ ಸಾಲಿನಲ್ಲಿ ತಾಲೂಕಿನಲ್ಲಿ ಒಟ್ಟು ೪೪,೭೧೦ ಹೆ. ಬಿತ್ತನೆಯಾಗಿದ್ದ ಜಮೀನಿನಲ್ಲಿ ೨೩,೪೬೬ ಹೆ. ನಿವ್ವಳ ಭೂಮಿಯು ನೀರಾವರಿಗೊಳಪಟ್ಟಿತ್ತು. ಇದರಲ್ಲಿ ೨೦,೨೪೬ ಹೆ.ಗೆ ಕಾಲುವೆಗಳಿಂದ, ೯೭೦ ಹೆ.ಗೆ ಕೆರೆಗಳಿಂದ, ೧,೧೦೦ ಹೆ.ಗೆ ಬಾವಿಗಳಿಂದ ೧೦೦೦ ಹೆ.ಗೆ ಕೊಳವೆ ಬಾವಿಗಳಿಂದ ಹಾಗೂ ೧೫೦ ಹೆ. ಜಮೀನಿಗೆ ಇತರೆ ಮೂಲಗಳಿಂದ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿತ್ತು. ೨೦೦೮ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ನೀರಾವರಿಗೊಳಪಟ್ಟಿದ್ದ ಒಟ್ಟು ೩೨,೯೬೦ ಹೆಕ್ಟೇರುಗಳಲ್ಲಿ ೨೯,೭೦೦ ಹೆ.ಕಾಲುವೆಗಳಿಂದಲೂ ೧,೦೯೦ ಹೆ. ಕೆರೆಗಳಿಂದಲೂ ೯೯೦ ಹೆ. ಬಾವಿಗಳಿಂದಲೂ, ೧೧೦೦ ಹೆ. ಕೊಳವೆಬಾವಿಗಳಿಂದಲೂ ಹಾಗೂ ೮೦ ಹೆ. ಏತ ನೀರಾವರಿಯಿಂದಲೂ ಈ ಸೌಕರ್ಯವನ್ನು ಹೊಂದಿದ್ದು, ಆ ಸಾಲಿನಲ್ಲಿ ಜಿಲ್ಲೆಯಲ್ಲಿ ನೀರಾವರಿಗೊಳಪಟ್ಟ ಹೆಚ್ಚು ಪ್ರದೇಶವನ್ನುಳ್ಳ ಹೆಗ್ಗಳಿಕೆಯನ್ನು ನರಸೀಪುರ ತಾಲೂಕು ಪಡೆದಿತ್ತು.

**ತಾಲೂಕಿನಲ್ಲಿಯ ನೀರಾವರಿ ಸಾಧ್ಯತೆಗಳು :** ತಾಲೂಕಿನಲ್ಲಿ ಲಭ್ಯವಿರುವ ಜಲಸಂಪನ್ಮೂಲ ಗಳಿಂದ ನೀರಾವರಿ ಅಚ್ಚುಕಟ್ಟು ಪ್ರದೇಶದ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಬಹುದೆಂಬ ಅಂಶವನ್ನು ಬಹಳ ಹಿಂದೆಯೇ (೧೯೮೫) ನೀರಾವರಿ ಪರಿಣಿತರು ವ್ಯಕ್ತಪಡಿಸಿದ್ದಾರೆ. ಅದರಂತೆ ತಾಲೂಕಿನಲ್ಲಿ ಲಭ್ಯವಿದ್ದ ೪೦,೦೮೮ ಹೆ. ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವಷ್ಟು ಜಲಸಂಪನ್ಮೂಲವು ತಾಲೂಕಿನಲ್ಲಿ ಲಭ್ಯವಿದೆ ಎಂದು ೧೯೮೬ರ ವೇಳೆಗೆ ಅಂದಾಜಿಸಲಾಗಿತ್ತು. ಇದು ತಾಲೂಕಿನಲ್ಲಿ ಹರಿದು ಹೋಗುವ ಮಳೆ ನೀರಿನ ಮೇಲ್ಜಲದಿಂದ ಸುಮಾರು ೩೮,೧೧೮ ಹೆ. ಜಮೀನು ಹಾಗೂ ಅಂತರ್ಜಲದಿಂದ ೧,೯೭೦ ಹೆ. ಜಮೀನಿಗೂ ನೀರಾವರಿ ಸೌಕರ್ಯವನ್ನು ಕಲ್ಪಿಸುವ ಅಂಶವನ್ನು ಒಳಗೊಂಡಿತ್ತು.

**ತೋಟಗಾರಿಕೆ :** ತೋಟಗಾರಿಕೆ ಬೆಳೆಗಳಾದ, ಮಾವು, ತೆಂಗು, ಮುಂತಾದವು ತಾಲೂಕಿನಲ್ಲಿ ಬಹು ಹಿಂದಿನಿಂದಲೂ ಬೆಳೆಯಲ್ಪಡುತ್ತಿದ್ದುದ್ದಕ್ಕೆ ಸೋಮನಾಥಪುರ ಶಾಸನದಲ್ಲಿ ಉಲ್ಲೇಖವಿದೆ. ನೆರೆಯ ನಂಜನಗೂಡು ತಾಲೂಕಿನ ದಾಸನೂರಿನ ೧೫೨೭ರ ಶಾಸನದಲ್ಲಿ ತೆಂಗು, ಅಡಿಕೆ, ಹಲಸು, ಮಾವು, ನೇರಿಳೆ, ಈರಳೆ, ಕಿತ್ತಳೆ, ನಿಂಬೆ ದಾಳಿಂಬೆ, ಬಾಳೆ, ಕಬ್ಬು, ಕಾಡುಗೆಣಸುಗಳ ಉಲ್ಲೇಖವಿದೆ. ತಾಲೂಕಿನಲ್ಲಿ ಬಹು ಹಿಂದಿನಿಂದಲೂ ಮಾವಿನ ತೋಪು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದ್ದು, ೧೯೪೬ರ ಸಾಲಿನಲ್ಲಿ ತಾಲೂಕಿನ ೧೧೮ ಎಕರೆ ಜಮೀನಿನಲ್ಲಿ ತೆಂಗು, ೫೨ ಎಕರೆ ಪ್ರದೇಶದಲ್ಲಿ ತಂಬಾಕು, ಹಾಗೂ ೩೧೦ ಎಕರೆ ಪ್ರದೇಶದಲ್ಲಿ ತಲಕಾರು ಹಣ್ಣು ಹಂಪಲುಗಳನ್ನು ಬೆಳೆಯಲಾಗಿತ್ತೆಂದು ತಿಳಿದುಬರುತ್ತದೆ. ೧೯೮೩–೮೪ರ ಸಾಲಿನಲ್ಲಿ ತಾಲೂಕಿನ ೮೪೭ ಹೆ. ಪ್ರದೇಶದಲ್ಲಿ



ಹಣ್ಣು/ತರಕಾರಿಗಳನ್ನು ಬೆಳೆಯಲಾಗಿದ್ದು, ಅದರಲ್ಲಿ ೯೯ ಹೆ. ಪ್ರದೇಶದಲ್ಲಿ ಮಾವನ್ನು ಬೆಳೆಯಲಾಗಿತ್ತು.

ತೋಟಗಾರಿಕೆ ಇಲಾಖೆಯ ನಿಯಂತ್ರಣದಲ್ಲಿರುವ ತೋಟಗಾರಿಕೆ ಕ್ಷೇತ್ರ (ಫಾರಂ)ಗಳು ತಾಲೂಕಿನ ಹೊರಳಹಳ್ಳಿ, ಬನ್ನೂರು, ರಂಗಸಮುದ್ರ ಹಾಗೂ ತಾಲೂಕು ಕೇಂದ್ರ ನರಸೀಪುರಗಳಲ್ಲಿ ೧೯೮೫ರ ವೇಳೆಗೆ ಕಾರ್ಯನಿರ್ವಹಿಸುತ್ತಿದ್ದವು. ಅವುಗಳಲ್ಲಿ ೮.೧೦ ಹೆ. ವ್ಯಾಪ್ತಿಯನ್ನು ಹೊಂದಿದ್ದ ಹರಳಹಳ್ಳಿ ತೋಟಗಾರಿಕಾ ಕ್ಷೇತ್ರದಲ್ಲಿ ತೆಂಗು, ಮಾವು, ಸಪೋಟ, ದಾಳಿಂಬೆ ಹಾಗೂ ನಿಂಬೆಯ ಸಸಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿತ್ತು. ಕೇವಲ ೦.೮೧ ಹೆ. ವ್ಯಾಪ್ತಿಯನ್ನು ಹೊಂದಿದ್ದ ಬನ್ನೂರು ತೋಟಗಾರಿಕಾ ಕ್ಷೇತ್ರದಲ್ಲಿ ಸಪೋಟ ಹಾಗೂ ತೆಂಗಿನ ಸಸಿಗಳನ್ನು ಅಭಿವೃದ್ಧಿಪಡಿಸಿದರೆ, ೬.೬೮ ಹೆ. ವ್ಯಾಪ್ತಿಯನ್ನು ಹೊಂದಿದ ರಂಗಸಮುದ್ರದ ಸಸ್ಯಗಾರದಲ್ಲಿ ತೆಂಗು, ಸಪೋಟ, ಸೀಬಿ ಹಾಗೂ ಮೆಣಸಿನಕಾಯಿ ಸಸಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿತ್ತು. ಇದೇ ರೀತಿ ಕೇವಲ ೧.೦೧ ಹೆ. ವ್ಯಾಪ್ತಿಯನ್ನು ಹೊಂದಿದ್ದ ನರಸೀಪುರದ ತೋಟಗಾರಿಕಾ ಕ್ಷೇತ್ರದಲ್ಲಿ ಸಪೋಟ, ಸೀಬೆ ಹಾಗೂ ತೆಂಗಿನ ಸಸಿಗಳನ್ನೂ ಅಭಿವೃದ್ಧಿಪಡಿಸಲಾಗುತ್ತಿತ್ತು. ಇದೇ ರೀತಿ ಅಭಿವೃದ್ಧಿಪಡಿಸಿದ ಸಸಿಗಳನ್ನು ರೈತರಿಗೆ ಒದಗಿಸಲಾಗುತ್ತಿತ್ತು. ಈ ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ಸಹಾಯಕ ತೋಟಗಾರಿಕಾ ನಿರ್ದೇಶಕರಿರುತ್ತಾರೆ. ಈ ತೋಟಗಾರಿಕೆ ಕ್ಷೇತ್ರಗಳಲ್ಲಿ ವೈಜ್ಞಾನಿಕ ವಿಧಾನದ ಮೂಲಕ ಹಣ್ಣು ತರಕಾರಿಗಳನ್ನು ಬೆಳೆಯುವುದರ ಜೊತೆಗೆ ಅವುಗಳ ಪ್ರಚಾರಕ್ಕೂ ಕ್ರಮಕೈಗೊಳ್ಳಲಾಗುತ್ತದೆ. ಈ ತೋಟಗಾರಿಕಾ ಕ್ಷೇತ್ರಗಳಲ್ಲಿ ವಿವಿಧ ತರಕಾರಿ ಹಣ್ಣು ಹಾಗೂ ತೆಂಗಿನ ಸಸಿಗಳನ್ನು ಅಭಿವೃದ್ಧಿಪಡಿಸುವ ಸಸ್ಯಾಗಾರ ವಿಭಾಗವಿದ್ದು, ಅವುಗಳ ಅಭಿವೃದ್ಧಿಗಾಗಿ ಇಲಾಖೆಯು ಕಾಲಕಾಲಕ್ಕೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಇತ್ತೀಚೆಗೆ ತೆಂಗಿನ ಮರಗಳಿಗೆ ನುಸಿ ರೋಗದಿಂದಾದ ಅನಾಹುತವನ್ನು ಬಗೆಹರಿಸುವಲ್ಲಿ ತೋಟಗಾರಿಕೆ ಇಲಾಖೆಯು ಹಲವಾರು ಕ್ರಮಗಳನ್ನು ಕೈಗೊಂಡಿದೆ. ತಾಲೂಕಿನ ಗ್ರಾಮೀಣ ಯುವಕರಿಗೆ ತೋಟಗಾರಿಕೆಗೆ ಸಂಬಂಧಿಸಿದಂತೆ ತರಬೇತಿ ನೀಡಲು ನರಸೀಪುರ ತೋಟಗಾರಿಕೆ ಫಾರಂನಲ್ಲಿ ನಿರಂತರವಾಗಿ ಯತ್ನಿಸಲಾಗುತ್ತಿದ್ದು, ತರಬೇತಿ ಶಿಬಿರಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಇತರ ಸೌಲಭ್ಯಗಳೊಂದಿಗೆ ರೂ.೧೫೦ ಗಳ ಸ್ಟೈಫಂಡ್ ನೀಡಲಾಗುತ್ತದೆ. ತಾಲೂಕಿನಲ್ಲಿ ಮಲ್ಲಿಗೆ, ಚೆಂಡುಮಲ್ಲಿಗೆ, ಸೇವಂತಿಗೆ, ಕನಕಾಂಬರ, ಸುಗಂಧರಾಜ ಮುಂತಾದ ಪುಷ್ಪಗಳನ್ನು ಬೆಳೆಯಲಾಗುತ್ತಿದೆ.

ಜಿಲ್ಲೆಯು ಸುಗಂಧರಾಜ ಪುಷ್ಪದ ಉತ್ಪಾದನೆಯಲ್ಲಿ ಸಿಂಹಪಾಲನ್ನು ಹೊಂದಿದ್ದು, ೧೯೮೬ರ ವೇಳೆಗೆ ಬೀಜಾಭಿವೃದ್ಧಿಗಾಗಿ ತಾಲೂಕಿನ ನೀಲಸೋಗೆಯಲ್ಲಿ ವಾಣಿಜ್ಯ ಬೆಳೆಯಾದ ಸುಗಂಧರಾಜ ಪುಷ್ಪದ ವಿಶೇಷ ತೋಟಗಾರಿಕಾ ಕ್ಷೇತ್ರವನ್ನು ಆರಂಭಿಸುವ ಯೋಜನೆ ಇಲಾಖೆಗಿತ್ತು. ಜಿಲ್ಲೆಗೆ ವಿಶೇಷ ಹೆಸರನ್ನು ತಂದಿರುವ ನಂಜನಗೂಡು ರಸಬಾಳೆಯನ್ನು ತಾಲೂಕಿನಲ್ಲೂ ಬೆಳೆಯಲಾಗುತ್ತಿತ್ತು. ಆದರೆ ನುಗು ಜಲಾನಯನ ನಿರ್ಮಾಣದ ನಂತರ ಕೇರಳದಿಂದ ಪನಾಮ ವಿಲ್ಟ್ ಎಂಬ ರೋಗವು ಜಲ ಹಾಗೂ

ಮಣ್ಣಿನ ಮೂಲಕ ಜಿಲ್ಲೆಗೆ ವ್ಯಾಪಿಸಿದ್ದರಿಂದ ನಂಜನಗೂಡು ರಸಬಾಳೆಯು ಬಾಧೆಗೊಳಗಾದುದರಿಂದ ೧೯೮೭ರ ವೇಳೆಗೆ ನಂಜನಗೂಡು ರಸಬಾಳೆ ತಳಿಯು ಕ್ಷೀಣಿಸಲಾರಂಭಿಸಿತು. ಈ ರೋಗವನ್ನು ನಿಯಂತ್ರಿಸುವ ಕೀಟನಾಶಕಗಳು ಪತ್ತೆಯಾಗುವವರಿಗೂ ರೋಗರಹಿತ ಸಸಿಗಳ ಬಳಕೆ ಹಾಗೂ ನೀರಿನ ಸೂಕ್ತ ಬಸಿಯುವಿಕೆಯಿಂದ ಇದನ್ನು ನಿಯಂತ್ರಿಸಬಹುದಾಗಿದೆ.

೧೯೮೫-೮೬ರ ಸಾಲಿನಲ್ಲಿ ತಾಲೂಕಿನ ೪೫೬ ಹೆ. ಜಮೀನಿನಲ್ಲಿ ಹಣ್ಣಿನ ಬೆಳೆ, ೧,೩೭೯ ಹೆ. ಜಮೀನಿನಲ್ಲಿ ಪ್ಲಾಂಟೇಷನ್ ಹಾಗೂ ಸಂಬಾರ ಪದಾರ್ಥ ಬೆಳೆ ೧,೩೨೦ ಹೆ. ಜಮೀನಿನಲ್ಲಿ ತರಕಾರಿ ಬೆಳೆ ಹಾಗೂ ೨೪೨ ಹೆ. ಜಮೀನಿನ ವಾಣಿಜ್ಯ ಪುಷ್ಪ ಬೆಳೆಗಳನ್ನೂ ಬೆಳೆಯಲಾಗಿತ್ತು. ಅದೇ ೧೯೯೮-೯೯ರ ಸಾಲಿನಲ್ಲಿ ೬೯೦ ಹೆ. ಪ್ರದೇಶದಲ್ಲಿ ಹಣ್ಣಿನ ಬೆಳೆ, ೭೫ ಹೆ. ಪ್ರದೇಶದಲ್ಲಿ ಪ್ಲಾಂಟೇಶನ್ ಬೆಳೆ ಹಾಗೂ ೨೭೫ ಹೆ.ನಲ್ಲಿ ತರಕಾರಿ ಬೆಳೆಗಳನ್ನು ಬೆಳೆಯಲಾಗಿತ್ತು. ಅದೇ ೨೦೦೬ರ ಮಾರ್ಚ್ ಅಂತ್ಯಕ್ಕೆ ೯೦೮ ಹೆ.ನಲ್ಲಿ ಹಣ್ಣಿನ ಬೆಳೆ ೩೩೭ ಹೆ.ನಲ್ಲಿ ತರಕಾರಿ ಬೆಳೆ, ೧೬೨ ಹೆ.ನಲ್ಲಿ ಸಾಂಬಾರು ಬೆಳೆ, ಹಾಗೂ ೧೪೯೪ ಹೆ. ನಲ್ಲಿ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯಲಾಗಿತ್ತು. ಅಲ್ಲದೆ, ೭೪೯ ಹೆ.ನಲ್ಲಿ ವಾಣಿಜ್ಯಪುಷ್ಪ, ನಾಲ್ಕು ಹೆ.ನಲ್ಲಿ ಸುಗಂಧಿತ ಗಿಡಗಳನ್ನು ಬೆಳೆಯಲಾಗುತ್ತಿತ್ತು.

**ತೋಟಗಾರಿಕೆ ಸಂಘ :** ರಾಜ್ಯದಲ್ಲಿ ಮೈಸೂರು ತೋಟಗಾರಿಕೆ ಸಂಘವು ೧೯೧೨ರಷ್ಟು ಹಿಂದೆಯೇ ಆರಂಭವಾದರೂ ಅದರ ಮೊದಲ ಶಾಖೆಯು ಮೈಸೂರು ನಗರದಲ್ಲಿ ಆರಂಭವಾದದ್ದು ೧೯೫೩ರಲ್ಲಿ. ಅನಂತರದಲ್ಲಿ ತಾಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಶಾಖೆಗಳು ಆರಂಭವಾದವು. ಅದರಂತೆ ತಾಲೂಕಿನಲ್ಲೂ ತೋಟಗಾರಿಕಾ ಸಂಘವು ಆರಂಭವಾಯಿತು. ಈ ಸಂಘದ ಮೂಲ ಸದಸ್ಯರಿಗೆ ತಾಂತ್ರಿಕ ಸಲಹೆ, ಪೂರಕ ಸಲಕರಣೆ, ಸಸ್ಯಸಂರಕ್ಷಣಾ ವಿಧಾನಗಳ ಬಗ್ಗೆ ಮಾಹಿತಿ ಹಾಗೂ ನೆರವನ್ನು ನೀಡಲಾಗುತ್ತಿದೆ. ತೋಟಗಾರಿಕೆ ಬೆಳೆಗಳ ಉತ್ಪಾದಕರ ಮಾರಾಟ ಸಂಘದ ಮಾರಾಟ ಮಳಿಗೆಯನ್ನು ತಾಲೂಕುಮಟ್ಟದಲ್ಲಿ ಆರಂಭಿಸಲು ಮುಂದಾಗುವ ಮೂಲಕ ತಾಲೂಕಿನ ತೋಟಗಾರಿಕೆ ಬೆಳೆಗಳಿಗೆ ಮಾರುಕಟ್ಟೆಯನ್ನು ಇಲಾಖೆಯು ಒದಗಿಸಿದ್ದು ಅಂತಹ ಮಾರಾಟ ಮಳಿಗೆಗಳು ತಾಲೂಕು ಕೇಂದ್ರ ನರಸೀಪುರ ಹಾಗೂ ಹೋಬಳಿ ಕೇಂದ್ರ ಬನ್ನೂರುಗಳಲ್ಲಿವೆ.

**ಪಶುಸಂಗೋಪನೆ :** ಜಾನುವಾರುಗಳ ಪಾಲನೆ-ಪೋಷಣೆ ಜನಸಾಮಾನ್ಯರಿಗೆ ಹಾಲು, ಮೊಸರು, ಬೆಣ್ಣೆ ಮುಂತಾದ ಪೌಷ್ಟಿಕ ಆಹಾರಗಳನ್ನು ಒದಗಿಸುವುದರ ಜೊತೆಗೆ ಕೃಷಿಗೆ ಪೂರಕವಾಗಿ ಉಳುಮೆ, ಗೊಬ್ಬರ ಹಾಗೂ ಸಾಗಣೆಗಳಿಗೂ ನೆರವಾಗುತ್ತದೆ. ತತ್ಪರಿಣಾಮವಾಗಿ ಪಶುಸಂಗೋಪನೆಯು ಅನಾದಿ ಕಾಲದಿಂದಲೂ ಕೃಷಿಕರಿಗೆ ಪೂರಕ ಕಸುಬಾಗಿ ಪರಿಣಮಿಸಿದೆ. ಚೋಳ-ಹೊಯ್ಸಳ ಕಾಲದ ಶಾಸನಗಳಲ್ಲಿ ದೇವಾಲಯಗಳ ಸೇವೆಗೆಂದೇ ಗೋವುಗಳನ್ನು ದಾನ ಬಿಟ್ಟ ಉಲ್ಲೇಖ ಕಂಡುಬರುತ್ತದೆ. ಹಳ್ಳಿಕಾರ್ ತಳಿಯ ತವರು ಮೈಸೂರು ಜಿಲ್ಲೆಯಾಗಿದ್ದು, ಈ ಭಾಗದ ಕೃಷಿಗೆ ಇದು ಬೆನ್ನೆಲುಬಾಗಿತ್ತು.



ಹಳ್ಳಿಕಾರ್ ತಳಿಯು ಅಮೃತಮಹಲ್ ತಳಿಯನ್ನು ಹೋಲುತ್ತಿದ್ದು, ಬೇಸಾಯಕ್ಕೆ ಹೇಳಿಮಾಡಿಸಿದ್ದಾಗಿದ್ದು ಹಾಲು ಉತ್ಪನ್ನ ಕಡಿಮೆಯಾದರೂ, ಸಾರಿಗೆಗೆ ಹೆಚ್ಚು ಉಪಯುಕ್ತವಾಗಿತ್ತು. ಬಹುಹಿಂದಿನಿಂದಲೂ ಬಂಡೂರು ಕುರಿತಳಿಗೆ ಪ್ರಸಿದ್ಧವಾಗಿದೆ. ಕುರಿಸಾಕಣೆ, ಹೈನುಗಾರಿಕೆ, ಮೀನುಗಾರಿಕೆ, ಕುಕ್ಕುಟೋದ್ಯಮಗಳು ತಾಲೂಕಿನಲ್ಲಿ ಹಿಂದಿನಿಂದಲೂ ಪ್ರಚಲಿತದಲ್ಲಿವೆ. ದೇಶೀಯ ಹಸುಗಳ ಜೊತೆಗೆ ವಿಲಾಯ್ತಿ ಹಸುಗಳ ಸಾಕಣೆಯಿಂದಾಗಿ ಹೈನುಗಾರಿಕೆಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ. ಹೈನುಗಾರಿಕೆಯು ಗ್ರಾಮೀಣ ಪ್ರದೇಶದಲ್ಲಿ ಪ್ರಮುಖ ಉಪಕಸುಬಾಗಿ ಅಭಿವೃದ್ಧಿ ಹೊಂದಿ, ಅನೇಕ ಕುಟುಂಬಗಳಿಗೆ ಜೀವನಾಧಾರವಾಗಿದೆ. ವಿಜಯನಗರದ ಅರಸರ ಕಾಲದಲ್ಲಿ ಪಶುಸಂಗೋಪನೆ ಇಲಾಖೆಯನ್ನು ಕರುಹಟ್ಟಿ ಎಂದೇ ಕರೆಯಲಾಗುತ್ತಿದ್ದು, ವಿಜಯನಗರದರಸರ ಕಾಲದಲ್ಲಿ ಉತ್ತಮ ತಳಿಯ ರಾಸುಗಳನ್ನು ಶ್ರೀರಂಗಪಟ್ಟಣ ಪ್ರಾಂತಕ್ಕೆ ತರಲಾಯಿತೆಂಬ ಅಭಿಪ್ರಾಯವಿದೆ. ಮೈಸೂರು ಅರಸರ ಕಾಲದಲ್ಲಿ ಇದಕ್ಕೆ ಬೆಣ್ಣೆಚಾವಡಿ ಎಂದೇ ಕರೆಯಲಾಗುತ್ತಿದ್ದು, ಮುಂದೆ ಟಿಪ್ಪು ಕಾಲದಲ್ಲಿ ಅಮೃತಮಹಲ್ ಎಂದು ಬದಲಾಯಿಸಲಾಯಿತು. ದನಗಳ ಮೇವಿಗೆಂದು ಗೋಮಾಳ (ಕಾವಲ್)ಗಳನ್ನು ಬಿಡಲಾಗುತ್ತಿತ್ತು. ೧೯೭೨ರ ಜಾನುವಾರು ಗಣತಿ ಪ್ರಕಾರ ೪೮,೦೭೧ ದನ ೨೧,೯೫೦ ಎಮ್ಮೆ, ೨೬,೧೫೪ ಕುರಿ, ೧೪,೧೭೯ ಆಡು ಹಾಗೂ ೯೧,೫೫೮ ಕೋಳಿಗಳು ತಾಲೂಕಿನಲ್ಲಿದ್ದವು. ಅದೇ ೧೯೮೩ರ ಜಾನುವಾರು ಗಣತಿ ಪ್ರಕಾರ ತಾಲೂಕಿನಲ್ಲಿ ೫೨,೧೩೬ ದನ, ೧೭,೪೫೨ ಎಮ್ಮೆ, ೧೮,೯೬೯ ಕುರಿ, ೧೫,೬೯೨ ಆಡು, ೪೪೩ ಹಂದಿ, ೫,೬೭೫ ನಾಯಿ, ೮೬,೩೫೨ ಕೋಳಿ ಹಾಗೂ ೩೦೨ ಇತರ ಜಾನುವಾರುಗಳಿದ್ದವು. ಇದು ೧೯೯೭ರಲ್ಲಿ ೫೧,೯೪೫ ದನ, ೧೪,೭೧೨ ಎಮ್ಮೆ, ೨೩,೬೩೦ ಕುರಿ , ೨೧,೭೧೮ ಆಡು, ೭೩,೮೫೭ ಕೋಳಿ, ೫೦೩ ಹಂದಿ, ೫,೪೨೫ ನಾಯಿ, ೧೯ ಮೊಲ ಹಾಗೂ ೭೪ ಇತರೆ ಜಾನುವಾರುಗಳಿದ್ದವು. ಅದೇ ೨೦೦೩ರಲ್ಲಿ ಜರುಗಿದ ಜಾನುವಾರು ಗಣತಿಯಲ್ಲಿ ತಾಲೂಕಿನಲ್ಲಿ ೪೨,೯೨೪ (೨೭,೯೦೨ ದೇಶೀಯ ತಳಿ ಹಾಗೂ ೧೫,೦೨೨ ವಿದೇಶಿ ತಳಿ) ದನ, ೧೦,೯೭೩ ಎಮ್ಮೆ, ೨೫,೪೧೧ ಕುರಿ, ೨೦,೭೯೫ ಆಡು, ೬೯,೨೨೬ ಕೋಳಿ, ೮೩೫ ಹಂದಿ, ೬,೮೬೪ ನಾಯಿ, ೨೮ ಮೊಲ ಹಾಗೂ ೩೪ ಇತರ ಜಾನುವಾರುಗಳಿದ್ದವು. ಇಲ್ಲಿ ನೀಡಿರುವ ವಿವಿಧ ಜಾನುವಾರು ಗಣತಿ ಅಂಕಿಅಂಶಗಳಿಂದ ೧೯೭೩ರಲ್ಲಿದ್ದ ಎಮ್ಮೆಗಳ ಸಂಖ್ಯೆಯು ೨೦೦೩ರ ವೇಳೆಗೆ ಶೇ ೫೦ ಕಡಿಮೆಯಾಗಿರುವ ಅಂಶ ವೇದ್ಯವಾಗುತ್ತದೆ. ಕೋಳಿಗಳ ಸಾಕಣೆಯು ಒಂದು ಉದ್ಯಮವಾಗಿ ಪರಿಣಮಿಸಿದ್ದು, ತಾಲೂಕಿನ ಬನ್ನೂರು, ನರಸೀಪುರ, ಮುಂತಾದೆಡೆಗಳಲ್ಲಿ ಖಾಸಗಿ ಕೋಳಿಫಾರಂಗಳು ಅನೇಕರಿಗೆ ಜೀವನೋಪಾಯವನ್ನು ಕಲ್ಪಿಸಿವೆ. ೨೦೦೭ರ ಜಾನುವಾರು ಗಣತಿಯ ತಾತ್ಕಾಲಿಕ ಅಂಕಿಅಂಶಗಳ ಪ್ರಕಾರ ೫೨,೨೧೨ (೨೯೦೭೯ ಸ್ಥಳೀಯ + ೨೩,೧೪೧ ಮಿಶ್ರತಳಿ) ದನ, ೧೦,೭೦೬ ಎಮ್ಮೆ, ೩೪,೯೭೪ ಕುರಿ, ೨೭,೫೧೮ ಮೇಕೆ, ೧,೧೦೫ ಹಂದಿ, ಒಂಬತ್ತು ಮೊಲ ಹಾಗೂ ೧೭೫೧ ಇತರೆ ಜಾನುವಾರುಗಳು ಹಾಗೂ ೬೨,೭೦೪ ಕೋಳಿಗಳಿದ್ದವು. ಪಶುಸಂಗೋಪನಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಪಶ್ಚಿಮಘಟ್ಟ

ಅಭಿವೃದ್ಧಿ ಕಾರ್ಯಕ್ರಮ ವಿಶೇಷ ಘಟಕ ಯೋಜನೆ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಿಗಳು ನೆರವು ನೀಡುತ್ತಿವೆ.

**ಪಶುವೈದ್ಯಕೀಯ ಕೇಂದ್ರಗಳು :** ವಿವಿಧ ಜಾನುವಾರುಗಳ ಶುಶ್ರೂಷೆಯನ್ನು ಪಶು ವೈದ್ಯಕೀಯ ಕೇಂದ್ರಗಳು ನಿರ್ವಹಿಸುತ್ತವೆ. ಅದರಂತೆ ೧೯೭೬ರ ವೇಳೆಗೆ ನಾಲ್ಕು ಪಶು ಚಿಕಿತ್ಸಾಲಯಗಳು ತಾಲೂಕಿನ ಪಶು ಪ್ರಾಣಿಗಳಿಗೆ ಚಿಕಿತ್ಸೆ ನೀಡುವುದರ ಜೊತೆಗೆ ಹಸು ಎಮ್ಮೆಗಳಿಗೆ ಕೃತಕ ಗರ್ಭಧಾರಣೆ, ಬೀಜ ಕತ್ತರಿಸುವುದು, ಹಾಲು ಉತ್ಪಾದನೆ ದಾಖಲೆ ನಿರ್ವಹಣೆ, ರೋಗ ನಿಯಂತ್ರಣ, ಸಂಚಾರಿ ಚಿಕಿತ್ಸಾ ಸೇವೆ ಮುಂತಾದ ಕಾರ್ಯಗಳನ್ನು ನರಸೀಪುರ, ಬನ್ನೂರು, ತಲಕಾಡು ಹಾಗೂ ವ್ಯಾಸರಾಜಪುರ (ಸೋಸಲೆ)ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಮೂಗೂರಿನಲ್ಲಿದ್ದ ಗ್ರಾಮೀಣ ಪಶು ವೈದ್ಯಕೀಯ ಚಿಕಿತ್ಸಾಲಯವು ೧೯೮೬ರ ವೇಳೆಗಾಗಲೇ ಕಾರ್ಯ ನಿರ್ವಹಿಸುತ್ತಿತ್ತು. ಮುಂದೆ ೧೯೯೬ರ ವೇಳೆಗೆ ತಾಲೂಕಿನಲ್ಲಿ ಒಂದು ಪಶು ವೈದ್ಯಕೀಯ ಕೇಂದ್ರ, ನಾಲ್ಕು ಪಶುಚಿಕಿತ್ಸಾಲಯ, ಒಂಭತ್ತು ಪ್ರಾಥಮಿಕ ಪಶುವೈದ್ಯ ಕೇಂದ್ರ, ಒಂದು ಸಂಚಾರಿ ಪಶು ಚಿಕಿತ್ಸಾಲಯ ಹಾಗೂ ಐದು ಕೃತಕ ಗರ್ಭಧಾರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು. ಅದೇ ೨೦೦೯ರ ವೇಳೆಗೆ ತಾಲೂಕಿನ ನರಸೀಪುರ ಹಾಗೂ ಬನ್ನೂರುಗಳಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳು, ಒಂಬತ್ತು ಪಶು ಚಿಕಿತ್ಸಾಲಯಗಳು, ಏಳು ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಒಂದು ಸಂಚಾರಿ ಪಶು ಚಿಕಿತ್ಸಾಲಯ ಹಾಗೂ ನಾಲ್ಕು ಕೃತಕ ಗರ್ಭಧಾರಣಾ ಕೇಂದ್ರ, ನಾಲ್ಕು ಪ್ರಧಾನ ಗ್ರಾಮೀಣ ಯೋಜನಾ ಉಪಕೇಂದ್ರ ಹಾಗೂ ಒಂದು ಕೋಳಿ ವಿಸ್ತರಣಾಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು.

**ಹಾಲು ಉತ್ಪಾದಕರ ಸಹಕಾರಿ ಸಂಘಗಳು :** ಮೈಸೂರು ಹಾಲು ಉತ್ಪಾದಕರ ಸಹಕಾರಿ ಒಕ್ಕೂಟವು ೧೯೭೬ರಲ್ಲಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ಹೈನು ಅಭಿವೃದ್ಧಿ ನಿಗಮದ ಆಶ್ರಯದಡಿ ಆರಂಭವಾಯಿತು. ಹಾಲು ಉತ್ಪಾದಕರ ಸಹಕಾರಿ ಸಂಘಗಳು ಒಕ್ಕೂಟದ ಶಾಖೆಗಳಾಗಿ ಗ್ರಾಮೀಣ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾ ಮಟ್ಟದಲ್ಲಿ ಹಾಲು ಒಕ್ಕೂಟದ ಜಿಲ್ಲಾ ಘಟಕಗಳಿರುತ್ತವೆ. ಅದರಂತೆ ನರಸೀಪುರ ತಾಲೂಕಿನಲ್ಲಿ ಗ್ರಾಮೀಣ ಮಟ್ಟದಲ್ಲಿ ಹೈನುಗಾರಿಕೆಯಲ್ಲಿ ತೊಡಗಿರುವ ರೈತರು, ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ರಚಿಸಿಕೊಂಡದ್ದು, ಸದಸ್ಯರು ಒದಗಿಸುವ ಹಾಲಿನಲ್ಲಿರುವ ಕೊಬ್ಬಿನ ಪ್ರಮಾಣದ ಮೇಲೆ ಅವರಿಗೆ ಹಣ ಪಾವತಿಸಲಾಗುತ್ತದೆ. ಇಂತಹ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ತಾಲೂಕಿನ ವಿವಿಧ ಗ್ರಾಮಗಳಲ್ಲಿ ನೋಡಬಹುದಾಗಿದೆ. ಸಂಘದ ಸದಸ್ಯರ ಹಸುಗಳಿಗೆ ಒಕ್ಕೂಟದಿಂದ ಆರೋಗ್ಯ ಕಾರ್ಯಕ್ರಮದಡಿ ಚಿಕಿತ್ಸೆಯನ್ನು ನೀಡುವ ಸೌಕರ್ಯ ಒದಗಿಸಲಾಗಿದೆ. ಅಲ್ಲದೇ ಹೈನುಗಾರಿಕೆ ಸುಧಾರಣೆಗೆ ಸಂಬಂಧಿಸಿದಂತೆ, ಆಯಾ ರೈತರಿಗೆ ತರಬೇತಿ ಶಿಬಿರವನ್ನು ಏರ್ಪಡಿಸಲಾಗುತ್ತದೆ. ಎಚ್.ಎಫ್ (ಹೊಲಸ್ಟೇನ್ ಫೈಸಿಯನ್) ಜೆರ್ಸಿ ಮುಂತಾದ ಡೆನ್ಮಾರ್ಕ್‌ತಳಿಯ ರಾಸುಗಳನ್ನು ಖರೀದಿಸಲು ಆರ್ಥಿಕ ನೆರವು, ಅವುಗಳ ಪಾಲನೆ–ಪೋಷಣೆಗಳಿಗೆ ಸಂಬಂಧಿಸಿದಂತೆ, ರೈತರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮವನ್ನು



ಈ ಸಂಘಗಳು ನಿರ್ವಹಿಸುತ್ತವೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಅಂತಹ ೧೦೨ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ೨೩,೫೪೦ ಸದಸ್ಯರನ್ನು ಹೊಂದಿದ್ದವು.

**ಕುರಿಸಾಕಣೆ :** ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಕುರಿಸಾಕಣೆಯು ಒಂದು ಪ್ರಮುಖ ಉಪಕಸುಬಾಗಿದ್ದು, ಕುರುಬ ಜನಾಂಗದವರು ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದು, ಕುರುಬೂರು, ಕರೊಹಟ್ಟಿ ಮುಂತಾದವು ಕುರುಬರೇ ಅಧಿಕ ಸಂಖ್ಯೆಯಲ್ಲಿರುವ ಗ್ರಾಮಗಳಾಗಿವೆ. ಒಂದು ಕಾಲದಲ್ಲಿ ಕುರುಬರಿಗಷ್ಟೇ ಸೀಮಿತವಾಗಿದ್ದ ಕುರಿ ಸಾಗಣೆಯನ್ನು ಇಂದು ಇತರ ಜಾತಿಯವರೂ ಅನುಸರಿಸುವುದು ಸಾಮಾನ್ಯವಾಗಿದೆ. ತಾಲೂಕಿನಲ್ಲಿ ನಾನಾ ತಳಿಯ ಕುರಿಗಳಿದ್ದರೂ ಮಾಂಸಕ್ಕೆ ಹೆಸರಾಗಿರುವ ಬಂಡೂರು ಕುರಿ ಹೆಚ್ಚು ಬಳಕೆಯಲ್ಲಿದೆ. ಜಿಲ್ಲಾ ಮಟ್ಟದಲ್ಲಿ ಕುರಿ ಸಾಕಣೆದಾರರ ಸಂಘದವರು ಕುರಿ ಸಾಕಣೆದಾರರಿಗೆ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದ್ದು, ಸರ್ಕಾರವು ತಾಂತ್ರಿಕ ನೆರವನ್ನು ನೀಡುತ್ತಿದೆ.

**ಕುಕ್ಕುಟೋದ್ಯಮ :** ಅಧಿಕ ಆದಾಯವನ್ನು ತರುವ ಪ್ರಮುಖ ಉಪಕಸುಬಾಗಿರುವ ಕೋಳಿಸಾಕಣೆಯು ಪ್ರೊಟೀನ್‌ಯುಕ್ತ ಮೊಟ್ಟೆ, ಮಾಂಸಗಳಂತಹ ಪೌಷ್ಟಿಕ ಆಹಾರವನ್ನು ಮಾನವನಿಗೆ ಒದಗಿಸುತ್ತದೆ. ತಾಲೂಕು ಕೇಂದ್ರ ನರಸೀಪುರದಲ್ಲಿರುವ ಕುಕ್ಕುಟೋದ್ಯಮ ವಿಸ್ತರಣೆ ಕೇಂದ್ರವು ಕೋಳಿ ಸಾಕಣೆದಾರರಿಗೆ ರೋಗರುಜಿನಗಳ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡುತ್ತಿದೆ. ತಾಲೂಕಿನಲ್ಲೂ ಅನ್ವಯಿಕ ಪ್ರೊಟೀನ್ ಆಹಾರ ಕಾರ್ಯಕ್ರಮವನ್ನು ೧೯೬೭–೬೮ರ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ೨೦೦೭ರ ಜಾನುವಾರು ಗಣತಿಯ, (ತಾತ್ಕಾಲಿಕ) ಅಂಕಿಅಂಶಗಳ ಪ್ರಕಾರ, ತಾಲೂಕಿನಲ್ಲಿ ೬೨,೭೦೪ ಕೋಳಿಗಳಿದ್ದು, ಇದು ಕುಕ್ಕುಟೋದ್ಯಮದ ಅಭಿವೃದ್ಧಿಯನ್ನು ಸೂಚಿಸುತ್ತದೆ.

**ಮೀನುಗಾರಿಕೆ :** ತಾಲೂಕಿನಲ್ಲಿ ಹರಿದಿರುವ ಕಾವೇರಿ, ಕಪಿಲ ನದಿಗಳ ಜೊತೆಗೆ ಕೆರೆ–ಕೊಳ ನೀರಾವರಿ ಬಾವಿ ಮುಂತಾದವು ಒಳನಾಡ ಮೀನುಗಾರಿಕೆಗೆ ಅನುಕೂಲ ಒದಗಿಸಿವೆ. ಇದು ಬಹುಹಿಂದಿನಿಂದಲೂ ರೂಢಿಯಲ್ಲಿತ್ತೆಂಬುದಕ್ಕೆ ಅವುಗಳ ಮೇಲೆ ವಿಧಿಸಲಾಗುತ್ತಿದ್ದ 'ಪಸೆವಾರು' ಎಂಬ ತೆರಿಗೆಯ ಉಲ್ಲೇಖ ಶಾಸನಗಳಲ್ಲಿರುವುದೇ ಸಾಕ್ಷಿ. ಕಾವೇರಿ ಮತ್ತದರ ಉಪನದಿಗಳಲ್ಲಿ ದೊರೆಯುವ ಮಹ್ಸೀರ್ ಮೀನುಗಳು ಬಹುಹಿಂದಿನಿಂದಲೂ ಪ್ರಸಿದ್ಧವಾಗಿದ್ದವು. ಆದರೆ ವಿನಾಶಕಾರಿ ಮೀನುಗಾರಿಕೆಯಿಂದಾಗಿ ಕ್ಷೀಣಿಸಲಾರಂಭಿಸಿದ ಈ ತಳಿಯನ್ನು ಅಭಿವೃದ್ಧಿಪಡಿಸಲು, ೨೨ ಸಾವಿರ ಮಹ್ಸಿರ್ ತಳಿಯ ಮರಿಗಳನ್ನು ೧೯೮೫ರಷ್ಟು ಹಿಂದೆಯೇ ಮಹಾರಾಷ್ಟ್ರದಿಂದ ಆಮದು ಮಾಡಿಕೊಂಡು ಕಾವೇರಿ ಮತ್ತಿತರ ನದಿಗಳಿಗೆ ಬಿಡಲಾಗಿದೆ. ಅಲ್ಲದೆ ಉತ್ತರ ಭಾರತದಿಂದಲೂ ಹಲವಾರು ತಳಿಗಳನ್ನು ತರಿಸುವ ಮೂಲಕ ಮೀನು ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ತಾಲೂಕಿನಲ್ಲಿ ೧೯೮೧ರ ಸಾಲಿನಲ್ಲಿ ಒಟ್ಟು ೩೨೬ ಟನ್ ಮೀನನ್ನು ಹಿಡಿಯಲಾಗಿತ್ತೆಂದು ಅಂದಾಜಿಸಲಾಗಿದೆ. ಅದೇ ೧೯೮೪–೮೫ರ ಸಾಲಿನಲ್ಲಿ ತಾಲೂಕಿನಲ್ಲಿ ಸುಮಾರು ೧೦೪೩ ಹೆಕ್ಟೇರು ನೀರು ವ್ಯಾಪಿಸಿರುವ ಪ್ರದೇಶವನ್ನು ಹೊಂದಿದ್ದ ಒಟ್ಟು ೭೬ ಲೋಕೋಪಯೋಗಿ ನಿಯಂತ್ರಿತ ಕೆರೆಗಳಲ್ಲಿ ೬೩೫ ಮಂದಿ ಮೀನುಗಾರಿಕೆಯಲ್ಲಿ

ತೊಡಗಿದ್ದು, ೧೬೦ ಟನ್ ಹಿಡಿದ ಮೀನನ್ನು ಮಾರಾಟ ಮಾಡಲಾಗಿತ್ತು. ಅದೇ ೧೯೯೬–೯೭ರ ಸಾಲಿನಲ್ಲಿ ತಾಲೂಕಿನಲ್ಲಿ ೧,೨೪೮ ಟನ್ ಮೀನನ್ನು ಹಿಡಿಯಲಾಗಿದ್ದು, ೨೦೦೧ರ ಸಾಲಿನಲ್ಲಿ ೧೮೨೮ ಟನ್‌ಗಳಿಗೇರಿದ ಮೀನಿನ ಶೇಖರಣೆಯು ೨೦೦೨ರ ಸಾಲಿನಲ್ಲಿ ೧೫೮೧ ಮೆ. ಟನ್‌ಗಳಿಗಿಳಿದಿತ್ತು. ಅದೇ ೨೦೦೯ರ ಅಂತ್ಯಕ್ಕೆ ಇದು ೯೪೧.೮೩ ಮೆ. ಟನ್ ಆಗಿತ್ತು.

**ಬರ / ಕ್ಷಾಮ :** ೧೮೭೫–೭೬ರಲ್ಲಿ ಜರುಗಿದ ಭೀಕರ ಕ್ಷಾಮವೂ ಸೇರಿದಂತೆ ೧೮೨೪, ೧೮೩೧, ೧೮೫೧, ೧೮೬೧, ೧೮೬೫, ೧೮೭೫–೭೭, ೧೮೮೪, ೧೮೮೭–೮೮, ೧೮೯೮, ೧೯೦೧ ಹಾಗೂ ೧೯೦೮ ರಲ್ಲಿ ಉಂಟಾದ ಕ್ಷಾಮ–ಡಾಮರಗಳ ದುಷ್ಪರಿಣಾಮವು ಜಿಲ್ಲೆಯೂ ಸೇರಿದಂತೆ ನರಸೀಪುರ ತಾಲೂಕಿನ ಮೇಲೆ ಅಷ್ಟೇನು ಆಗಿರಲಿಲ್ಲವೆಂದು ವಿವಿಧ ವರದಿಗಳಿಂದ ವೇದ್ಯವಾಗುತ್ತದೆ. ಆದರೆ ೧೯೨೩ರ ಅನಾವೃಷ್ಟಿಯಿಂದಾಗಿ ಉಂಟಾದ ಕ್ಷಾಮದ ಬಿಸಿ ತಾಲೂಕಿಗೂ ತಟ್ಟಿತ್ತು. ಕುಡಿಯುವ ನೀರಿಗಾಗಿ ತಾತ್ಕಾಲಿಕ ಬಾವಿ ನಿರ್ಮಿಸಿ, ದನದ ಮೇವನ್ನು ಆಮದು ಮಾಡಿಕೊಳ್ಳಲಾಯಿತು. ಕೂಲಿ–ಕಾಳು ಯೋಜನೆಯಡಿ ಕೆರೆಗಳ ಸಂರಕ್ಷಣೆ, ನಿರ್ವಹಣೆಯತ್ತ ಗಮನ ಹರಿಸಲಾಯಿತು. ಭೂಅಭಿವೃದ್ಧಿಗಾಗಿ ನೀರಾವರಿ ಬಾವಿಗಳಿಗೆಂದು ಸಾಲವನ್ನು ನೀಡಲಾಯಿತು.

ಈ ತಾಲೂಕು ಸೇರಿದಂತೆ ಇಡೀ ರಾಜ್ಯವು ೧೯೮೨–೮೩ರಿಂದ ೧೯೮೪–೮೫ರವರೆಗೆ ಭೀಕರ ಬರಗಾಲವನ್ನು ಎದುರಿಸಿತಾದರೂ, ೧೯೮೬–೮೭ರ ವೇಳೆಗೆ ಚೇತರಿಸಿಕೊಂಡಿತು. ಈ ಅವಧಿಯಲ್ಲಿ ಬರಕಾಮಗಾರಿ ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಬರಪೀಡಿತ ಜನರಿಗೆ ದುಡಿಮೆಯ ಜೊತೆಗೆ ಕಾಳಿನ ರೂಪದಲ್ಲಿ ಕೂಲಿಯನ್ನೂ ನೀಡಲಾಯಿತು. ಅದರಂತೆ ತಾಲೂಕಿನಲ್ಲಿ ೧೯೮೨–೮೩ರಲ್ಲಿ ೨೩ ಕಾಮಗಾರಿಗಳಿಗೆಂದು ೬೫,೦೦೦ ರೂ; ೧೯೮೩–೮೪ರಲ್ಲಿ ೧೦೩ ಕಾಮಗಾರಿಗಳಿಗೆಂದು ೪.೧೭ ಲಕ್ಷ ರೂ; ೧೯೮೪–೮೫ರಲ್ಲಿ ೨೨೫೭ ಕಾಮಗಾರಿಗಳಿಗೆಂದು ೧೨.೩೮ ಲಕ್ಷ ರೂ.; ೧೯೮೫–೮೬ರಲ್ಲಿ ೧೪೮ ಕಾಮಗಾರಿಗಳಿಗೆಂದು ೩೫.೫೫ ಲಕ್ಷ ರೂ. ಹಾಗೂ ೧೯೮೬–೮೭ರಲ್ಲಿ ೧೨೦ ಕಾಮಗಾರಿಗಳಿಗೆಂದು ೨೧.೨೬ ಲಕ್ಷ ರೂ.ಗಳನ್ನು ತಾಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ ತಹಶೀಲ್ದಾರರ ಕಚೇರಿಗಳು ವೆಚ್ಚಮಾಡಿದ್ದವು. ಇದೇ ನೀತಿಯನ್ನು ನಿರಂತರವಾಗಿ ಅನುಸರಿಸಲಾಗುತ್ತಿದ್ದು, ಸರ್ಕಾರದ ಆದೇಶದಂತೆ ಕಾಲಕಾಲಕ್ಕೆ ಸೂಕ್ತ ಕ್ರಮವನ್ನು ಈ ನಿಟ್ಟಿನಲ್ಲಿ ಕೈಗೊಳ್ಳಲಾಗುತ್ತದೆ.

**ನೆರೆ ಪ್ರವಾಹ ಹಾವಳಿ :** ಕಾವೇರಿ–ಕಪಿಲ ನದಿ ದಂಡೆಯ ಮೇಲಿರುವ ಗ್ರಾಮಗಳಿಗೆ ಕಾಲಕಾಲಕ್ಕೆ ಆ ನದಿಗಳ ಪ್ರವಾಹದಿಂದುಂಟಾಗುವ ಹಾನಿ ಗಮನಾರ್ಹವಾಗಿದೆ. ನೈಋತ್ಯ ಮಾರುತಗಳಿಂದಾಗಿ ಪಶ್ಚಿಮ ಘಟ್ಟದಲ್ಲಿ ಅಧಿಕ ಮಳೆಯಾದಾಗ ಕಾವೇರಿ ಮತ್ತದರ ಉಪನದಿಗಳಲ್ಲಿ ಪ್ರವಾಹ ಉಂಟಾಗುತ್ತದೆ. ಅದರಲ್ಲೂ ೧೯೧೧ರಲ್ಲಿ ಜುಲೈ ೧೯–೨೨ರ ಅವಧಿಯಲ್ಲಿ ಉಂಟಾದ ಭೀಕರ ಪ್ರವಾಹವು ಸಾಕಷ್ಟು ಹಾನಿಯನ್ನುಂಟು



ಮಾಡಿದ್ದು, ಅದರ ನೆನಪು ಇನ್ನೂ ಜನಮಾನಸದಲ್ಲಿ ಉಳಿದಿದೆ. ಅದೇ ೧೯೨೪ರಲ್ಲಿ ಕಾವೇರಿ ನದಿಯಲ್ಲಿ ಪ್ರವಾಹ ಬಂದು ದಂಡೆಯುದ್ದಕ್ಕೂ ಇದ್ದ ಗದ್ದೆಗಳು ಬಲಿಯಾದವು. ಅದರಲ್ಲೂ ತಾಲೂಕು ಕೇಂದ್ರ ನರಸೀಪುರವು ತೀವ್ರ ಹಾನಿಗೊಳಗಾಯಿತು. ಅದರ ನೆನಪಾಗಿ ಹಾಕಿಸಿರುವ ಶಿಲಾಬರಹವನ್ನು ಇಂದಿಗೂ ನರಸೀಪುರದ ಗುಂಜಾನರಸಿಂಹ ಗುಡಿ ಮುಂದೆ ಹೊಳೆದಂಡೆಯಲ್ಲಿ ನೋಡಬಹುದಾಗಿದೆ. ಈ ಪ್ರವಾಹದಿಂದಾಗಿ ಹೆಮ್ಮಿಗೆ, ಸೋಸಲೆ ಮುಂತಾದ ನದಿ ತೀರದ ಗ್ರಾಮಗಳನ್ನು ಶಾಶ್ವತವಾಗಿ ಸ್ಥಳಾಂತರಿಸಬೇಕಾಯಿತು. ಮತ್ತೆ ೧೯೫೫ರಲ್ಲಿ ಕಾವೇರಿಯಲ್ಲಿ ಪ್ರವಾಹ ಬಂದಾಗ ತಾಲೂಕಿನ ಹೊಳೆ ಬದಿಯಲ್ಲಿದ್ದ ಗ್ರಾಮಸ್ಥರಿಗೆ ಎಚ್ಚರಿಕೆ ನೀಡಲಾಗಿತ್ತು. ತೀರಾ ಇತ್ತೀಚೆಗೆ ೨೦೦೧ರಲ್ಲಿ ಕಾವೇರಿಯಲ್ಲಿ ಪ್ರವಾಹ ಬಂದಾಗ ಅಲ್ಪಸ್ವಲ್ಪ ಹಾನಿಯಾಗಿತ್ತು.

## ಅಧ್ಯಾಯ ೫
# ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

**ಪ್ರಾಚೀನ ಕೈಗಾರಿಕೆಗಳು :** ತಾಲೂಕಿನಲ್ಲಿ ಬಹು ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದ ನೇಕಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಗಾಣ, ಉಪ್ಪು, ಸುಣ್ಣ, ಇಟ್ಟಿಗೆ ಉದ್ಯಮ ಮುಂತಾದ ಸಾಂಪ್ರದಾಯಿಕ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಶಾಸನಾಧಾರಗಳಿವೆ. ಅದರಲ್ಲೂ ಎಣ್ಣೆ ತಯಾರಿಕೆ, ನೇಕಾರಿಕೆಗಳಿಗೆ ಸಂಬಂಧಿಸಿದಂತೆ ತಾಲೂಕಿನ ಬೆಟ್ಟಹಳ್ಳಿ (೧೩೧೧) ಸೇರಿದಂತೆ ಅನೇಕ ಶಾಸನಗಳಲ್ಲಿ ಪ್ರಸ್ತಾಪವಿದೆ. ತಾಲೂಕಿನ ಕುರುಬೂರು ಹಾಗೂ ಕರೋಹಟ್ಟಿಯ ಶಾಸನಗಳಲ್ಲಿ ಉಪ್ಪಿನಮೋಳೆಯ ಉಲ್ಲೇಖವಿದ್ದು, ತಾಲೂಕಿನಲ್ಲಿ ಈಗಲೂ ಉಪ್ಪಾರರು, ಅಧಿಕ ಸಂಖ್ಯೆಯಲ್ಲಿರುವುದು ಇದನ್ನು ಪುಷ್ಟೀಕರಿಸುತ್ತದೆ.

ಕಾವೇರಿ–ಕಪಿಲ ನದಿಗಳಿಂದಾಗಿ ಹಿಂದಿನಿಂದಲೂ ಈ ತಾಲೂಕು ಕೃಷಿ ಪ್ರಧಾನವಾಗಿದ್ದರೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಜಾರಿಗೆ ತಂದಿರುವ ಪ್ರಗತಿಪರ ಕೈಗಾರಿಕಾ ನೀತಿಗಳಿಂದಾಗಿ ಕೈಗಾರಿಕಾ ರಂಗದಲ್ಲೂ ಪ್ರಗತಿ ಸಾಧಿಸಲು ಯತ್ನಿಸುತ್ತಿದೆ. ಗ್ರಾಮೀಣ ಪ್ರದೇಶದಲ್ಲೂ ಕೈಗಾರಿಕಾಭಿವೃದ್ಧಿಗಾಗಿ ಗ್ರಾಮೀಣ ಕೈಗಾರಿಕೀಕರಣ ಯೋಜನೆಯನ್ನು ೧೯೫೪–೫೫ರಲ್ಲಿ ಜಾರಿಗೊಳಿಸಲಾಯಿತು. ಕೃಷಿ ಆಧಾರಿತ ರೇಷ್ಮೆ ಉದ್ಯಮ, ಆಲೆಮನೆ, ತೋಟಗಾರಿಕೆ ವಾಣಿಜ್ಯಬೆಳೆ, ಅಕ್ಕಿಗಿರಣಿ, ಎಣ್ಣೆಗಿರಣಿ ಮುಂತಾದ ಕೈಗಾರಿಕೆಗಳಲ್ಲದೆ ಇಟ್ಟಿಗೆ, ಹೆಂಚು, ಬಿದಿರು ಉತ್ಪನ್ನ, ಬಡಗಿ, ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ, ಸಾಮಿಲ್ಲು (ಮರಕೊಯ್ಯುವ ಕಾರ್ಖಾನೆ) ಮುಂತಾದ ಉದ್ಯಮಗಳೂ ತಾಲೂಕಿನಲ್ಲಿ ಕಂಡುಬರುತ್ತವೆ. ಆದರೆ ಖನಿಜ ಸಂಪನ್ಮೂಲದ ಕೊರತೆ ಹಾಗೂ ಸೀಮಿತ ಕೈಗಾರಿಕೆ ಚಟುವಟಿಕೆಗಳಿಂದಾಗಿ ನರಸೀಪುರ ತಾಲೂಕು ಸೇರಿದಂತೆ ಮೈಸೂರು ಜಿಲ್ಲೆಯನ್ನು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದ ಪ್ರದೇಶವೆಂದು ೧೯೭೧ರಲ್ಲಿ ಘೋಷಿಸುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ವಿಶೇಷ ರಿಯಾಯಿತಿ ಹಾಗೂ ಸವಲತ್ತುಗಳು ದೊರೆಯುವಂತಾಯಿತು. ಅಲ್ಲದೇ ರಾಜ್ಯದ ಅತೀ ಹಿಂದುಳಿದ ಮೂರು ಕೈಗಾರಿಕಾ ಜಿಲ್ಲೆಗಳಲ್ಲಿ ಮೈಸೂರು ಜಿಲ್ಲೆಯನ್ನೂ ಪರಿಗಣಿಸಿದ್ದುದರಿಂದ ಕೇಂದ್ರದ ಅನುದಾನದಲ್ಲಿ ಶೇ. ೧೫ ಸಬ್ಸಿಡಿಯೂ ಲಭಿಸುವಂತಾಯಿತು. ಅದರಂತೆ ತಾಲೂಕಿನಲ್ಲಿ ಆರಂಭವಾಗುವ ಕೈಗಾರಿಕೆಗಳಿಗೂ ಈ ಸಬ್ಸಿಡಿ ಲಭಿಸುವಂತಾಯಿತು.



ಅದರಲ್ಲೂ ದೇಶದಲ್ಲಿಯೇ ಮೊದಲ ಬಾರಿಗೆ ೧೯೮೨–೮೩ರಲ್ಲಿ ರಾಜ್ಯ ಮಟ್ಟದಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಘೋಷಿಸುವ ಮೂಲಕ ರಾಜ್ಯ ಸರ್ಕಾರವು ಕಾರ್ಮಿಕ ಪ್ರಧಾನ ಹಾಗೂ ವಿದ್ಯುತ್ ಪ್ರಧಾನ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ರಿಯಾಯಿತಿ ಸವಲತ್ತುಗಳನ್ನು ನೀಡಲು ಮುಂದಾಯಿತು. ಇದೇ ರೀತಿ ರಾಜ್ಯ ಸರ್ಕಾರದ ೧೯೮೮ ೧೯೯೦, ೧೯೯೩, ೧೯೯೬, ೧೯೯೮, ೨೦೦೧ ಹಾಗೂ ೨೦೦೬ ರ ಕೈಗಾರಿಕಾ ನೀತಿಗಳಲ್ಲೂ, ಅನೇಕ ಸವಲತ್ತು ಹಾಗೂ ವಿಶೇಷ ರಿಯಾಯಿತಿಗಳನ್ನು ಬೃಹತ್, ಮಧ್ಯಮ, ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆಂದು ಘೋಷಿಸಲಾಗಿದೆ. ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯು ರಾಜ್ಯದ ವಿವಿಧ ತಾಲೂಕುಗಳನ್ನು ಮೂರು ವಲಯಗಳನ್ನಾಗಿ ವರ್ಗೀಕರಿಸಿದ್ದು, ಆ ಪ್ರಕಾರ ೨೦೦೬ರ ನೂತನ ಕೈಗಾರಿಕಾ ನೀತಿಯನ್ನು ರೂಪಿಸಲಾಗಿದೆ. ಅದರಂತೆ ಈ ತಾಲೂಕು ಕೈಗಾರಿಕಾವಲಯ–I ಗುಂಪಿಗೆ ಒಳಪಟ್ಟಿದ್ದು ಕೈಗಾರಿಕೆಗಳಲ್ಲಿ ಹೆಚ್ಚು ಹಿಂದುಳಿದ ತಾಲೂಕು ಎಂದು ಪರಿಗಣಿಸಲ್ಪಟ್ಟಿದೆ. ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ. ೨೫ ಲಕ್ಷ ಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಕೈಗಾರಿಕೆಗಳು ಅತೀ ಸಣ್ಣ ಪ್ರಮಾಣದ ಕೈಗಾರಿಕೆಗಳಾಗಿದ್ದು, ಇವುಗಳಿಗೆ ಯಾವುದೇ ಪ್ರಾದೇಶಿಕ ನಿರ್ಬಂಧವಿರುವುದಿಲ್ಲ. ಸ್ವಂತವಾಗಿ ಅಥವಾ ಭೋಗ್ಯ ಇಲ್ಲವೇ ಹೈರ್ ಪರ್ಚೆಸ್ ಷರತ್ತಿನ ಮೇಲೆ ಹೊಂದಿರುವ ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ.೧೦೦ ಲಕ್ಷಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಕೈಗಾರಿಕೆಗಳಿಗೆ ಸಣ್ಣ ಪ್ರಮಾಣದ ಕೈಗಾರಿಕೆಗಳೆಂತಲೂ, ಅತಿ ಸಣ್ಣ/ಸಣ್ಣ ಪ್ರಮಾಣದ ಕೈಗಾರಿಕೆಗಳೆಂದು ವರ್ಗೀಕರಿಸಲ್ಪಡದ ಎಲ್ಲಾ ಕೈಗಾರಿಕೆಗಳನ್ನು ಮಧ್ಯಮ/ಬೃಹತ್ ಕೈಗಾರಿಕೆಗಳೆಂತಲೂ, ಪರಿಗಣಿಸಲಾಗಿದೆ. ಶೇ.೧೦೦ರಷ್ಟು ರಫ್ತು ಆಧಾರಿತ ಉದ್ಯಮವೆಂದರೆ, (ಭಾರತ ಸರ್ಕಾರ ಕಾಲಕಾಲಕ್ಕೆ ಅನುಮತಿ ನೀಡುವಂತೆ) ಉತ್ಪಾದಿಸಿದ ಎಲ್ಲಾ ಉತ್ಪನ್ನಗಳನ್ನು ಅಥವಾ ಕೇಂದ್ರ ಸರ್ಕಾರ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಯಂತೆ ಅಥವಾ ಪರಿಭಾಷೆಗನುಗುಣವಾದ ಪ್ರಮಾಣದಲ್ಲಿ ರಫ್ತು ಮಾಡುವುದಾಗಿ ಒಪ್ಪಿಕೊಂಡಿರುವಂತಹ ಒಂದು ಉದ್ಯಮ. ಇಂತಹ ಉದ್ಯಮಗಳನ್ನು, ರಫ್ತು ಆಧಾರಿತ ಘಟಕ (ಇ.ಒ.ಯು) / ಎಕ್ಸ್‌ಪೋರ್ಟ್ ಪ್ರಮೋಷನ್ ಇಂಡಸ್ಟ್ರಿಯಲ್ ಪಾರ್ಕ್ / ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ (ಇ.ಹೆಚ್.ಟಿ.ಪಿ) / ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಇಲ್ಲವೇ ವಿಶೇಷ ಆರ್ಥಿಕ ವಲಯ ಯೋಜನೆಗಳಡಿಯಲ್ಲಿ ಪ್ರಾರಂಭಿಸಬಹುದಾಗಿದೆ. ಬೃಹತ್ ಯೋಜನೆಯು ಸ್ಥಿರಾಸ್ತಿಯಲ್ಲಿ ರೂ. ೧೦೦ ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ ಹೂಡುವುದಾಗಿದೆ. ಈ ಕೈಗಾರಿಕಾ ನೀತಿಯನ್ವಯ ಬಂಡವಾಳ ಹೂಡಿಕೆ ಸಹಾಯಧನದಲ್ಲಿ ತಾಲೂಕಿನಲ್ಲಿ ಸಣ್ಣ ಕೈಗಾರಿಕೆಯನ್ನು ಆರಂಭಿಸಲು, ಸ್ಥಿರಾಸ್ತಿ ಮೌಲ್ಯದ ಶೇ.೨೫ರಷ್ಟು ಸಹಾಯಧನವನ್ನು ಪಡೆಯಬಹುದಾಗಿದ್ದು, ಗರಿಷ್ಟ ಮಿತಿಯನ್ನು ಪ್ರತಿ ಘಟಕಕ್ಕೆ ೧೫ ಲಕ್ಷ ರೂ.ಗಳಿಗೆ ನಿಗದಿಪಡಿಸಲಾಗಿದೆ. ಇದರ ಜೊತೆಗೆ ಉದ್ದಿಮೆದಾರರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಅಂಗವಿಕಲ/ ಅಲ್ಪಸಂಖ್ಯಾತ/ಮಾಜಿಯೋಧರಾಗಿದ್ದಲ್ಲಿ ಸ್ಥಿರಾಸ್ತಿ ಮೌಲ್ಯದ ಶೇ. ೫ ರಷ್ಟು ಹೆಚ್ಚು ಸಹಾಯಧನ ಪಡೆಯಬಹುದಾಗಿದ್ದು, ಗರಿಷ್ಟ